**ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ**

**The Karnataka State Rural Development and Panchayat Raj University, Gadag**

**29–09–2020 ರಂದು ಬೆಳಗ್ಗೆ 11:00 ಗಂಟೆಗೆ, 'Zoom' ಆನ್‌ಲೈನ್ ಮೀಟಿಂಗ್ ಆಪ್ ಮೂಲಕ ಜರುಗಿದ ಶೈಕ್ಷಣಿಕ ಪರಿಷತ್ತಿನ ಐದನೇ ಸಭೆಯ ನಡಾವಳಿಗಳು**

**Proceedings of the Fifth meeting of the Academic Council held on 29-09-2020 at 11:00 AM through 'Zoom' online meeting App**

**MEMBERS PRESENT:**

| | |
|---|---|
| 1. Prof. Vishnukant S Chatpalli<br>Vice-Chancellor, KSRDPRU,Gadag | Chairperson |
| 2. Dr. S.S. Meenakshisundaram, IAS (Retd.)<br>Chairman, MYRADA. | Member |
| 3. Prof. C.S. Patil<br>Dean & Director, KSLU Law School<br>Karnataka State Law University, Hubballi. | Member |
| 4. Dr. N. Sivanna<br>Director I/c., Centre for Research, Innovation and Evaluation, KSRDPRU. | Member |
| 5. Prof. Suresh Kishanrao<br>Honorary Professor, KSRDPRU. | Member |
| 6. Prof. P.P. Nageshwara Rao<br>Honorary Professor, KSRDPRU. | Member |
| 7. Prof. Ajjappa Alagawadi<br>Professor (Rtd), UAS, Raichur. | Member |
| 8. Prof. Gopal Naik,<br>Dean, Economics & Social Science,<br>IIM, Bengaluru. | Member |
| 9. Dr.D. Jeevan Kumar<br>Honorary Professor, KSRDPRU. | Member |
| 10. Prof Basawaraj L Lakkannavar<br>Registrar, KSRDPRU, Gadag | Member-Secretary |

11. Smt. Neeti Sharma — Member
Sr. Vice President & Co-Founder,
Team Lease Services Pvt. Ltd., Bengaluru

Leave of Absence:

1. Director, Abdul Nazeer Sab SIRD — Member
Mysuru

ಪ್ರಾರಂಭದಲ್ಲಿ ಶ್ರೀ ಬಸವರಾಜ ಲಕ್ಕಣ್ಣವರ, ಕುಲಸಚಿವರು, ಎಲ್ಲ ಸದಸ್ಯರನ್ನು ಶೈಕ್ಷಣಿಕ ಪರಿಷತ್ತಿನ 5ನೆಯ ಸಭೆಗೆ ಆತ್ಮೀಯವಾಗಿ ಸ್ವಾಗತಿಸಿದರು.

ಪ್ರಾರಂಭಿಕವಾಗಿ ಕುಲಪತಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಲು ಅವಕಾಶ ಮಾಡಿಕೊಟ್ಟಿದಕ್ಕಾಗಿ ಘನತೆವೆತ್ತ ರಾಜ್ಯಪಾಲರಿಗೆ, ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಇಲಾಖೆಯ ಮಾನ್ಯ ಸಚಿವರಿಗೆ ಧನ್ಯವಾದಗಳನ್ನು ಸಲ್ಲಿಸಿದರು. ನಂತರ, ಕೋವಿಡ್ ಸಾಂಕ್ರಾಮಿಕ ರೋಗದ ಸಮಯದಲ್ಲಿ, ಆನ್‌ಲೈನ್ ಮುಖಾಂತರ, ಶೈಕ್ಷಣಿಕ ಪರಿಷತ್ತಿನ ಸಭೆಯನ್ನು ಜರುಗಿಸುತ್ತಿದ್ದು, ಸದರಿ ಸಭೆಗೆ ಎಲ್ಲ ಸದಸ್ಯರು, ತಮ್ಮ ಅಮೂಲ್ಯವಾದ ಸಮಯವನ್ನು ನೀಡಿ, ಸಭೆಗೆ ಹಾಜರಾಗಿದ್ದಕ್ಕೆ ಧನ್ಯವಾದಗಳನ್ನು ಅರ್ಪಿಸಿದರು. ತದನಂತರ, ಅತೀ ಕಡಿಮೆ ಸಮಯದಲ್ಲಿ ವಿಶ್ವವಿದ್ಯಾಲಯಕ್ಕೆ ಭದ್ರ ಬುನಾದಿಯನ್ನು ಹಾಕಿ ಯಶಸ್ವಿಯಾಗಿ ಮುನ್ನಡೆಸಿದ, ಈ ಹಿಂದಿನ ಕುಲಪತಿಗಳ ಹಾಗೂ ಕುಲಸಚಿವರ ಸೇವೆಯನ್ನು ಪ್ರಶಂಸಿಸುತ್ತ ಸ್ಮರಿಸಿದರು. ಅಲ್ಲದೇ, ಈ ಹಿಂದಿನ ಕುಲಪತಿಗಳು ಹಾಗೂ ಕುಲಸಚಿವರಿಗೆ ವಿಶ್ವವಿದ್ಯಾಲಯವನ್ನು ಕಟ್ಟಲು ನೀಡಿದ ಸಹಕಾರ ಸಹಯೋಗವನ್ನು ನೆನೆದು ಧನ್ಯವಾದ ಅರ್ಪಿಸುತ್ತ, ಮುಂದೆಯೂ ಇದೇ ರೀತಿಯ ಮಾರ್ಗದರ್ಶನ ನೀಡುವಂತೆ, ಎಲ್ಲ ಶೈಕ್ಷಣಿಕ ಪರಿಷತ್ತಿನ ಸದಸ್ಯರಿಗೆ ಕೋರಿದರು.

ದಿನಾಂಕ: ೧೩-೦೧-೨೦೨೦ ರಂದು ನಡೆದ ಈ ಹಿಂದಿನ ಶೈಕ್ಷಣಿಕ ಪರಿಷತ್ತಿನ ಸಭೆಯ ನಂತರ ಹಮ್ಮಿಕೊಳ್ಳಲಾದ ವಿವಿಧ ಚಟುವಟಿಕೆಗಳ ಹಾಗೂ ಜರುಗಿಸಲಾದ ಸಭೆಗಳ ಕುರಿತು ಕುಲಪತಿಗಳು ಸಭೆಯಲ್ಲಿ ವಿವರಿಸಿದರು. ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳನ್ನು ಈಡೇರಿಸಲು, ಶೈಕ್ಷಣಿಕ, ಸಂಶೋಧನೆ, ತರಬೇತಿ ಹಾಗೂ ವಿಸ್ತೀರಣಾ ಚಟುವಟಿಕೆಗಳನ್ನು, ARTE (Academic, Research, Training and Extension) ಎಂದು ವಿಂಗಡಿಸಿ ಹಮ್ಮಿಕೊಳ್ಳಲಾಗುತ್ತಿದೆ. ಇದರಡಿ ವಿದ್ಯಾರ್ಥಿಗಳಿಗೆ ಶೇ.೯೫% ರಷ್ಟು ಪಠ್ಯಕ್ರಮವನ್ನು ಆನ್ಲೈನ್ ತರಗತಿಗಳನ್ನು ತೆಗೆದುಕೊಂಡು, ನಾಲ್ಕನೇಯ ಸೆಮಿಸ್ಟರ್ ನ ಪರೀಕ್ಷೆಗಳನ್ನು ಸರ್ಕಾರದ/ಯು.ಜಿ.ಸಿ.ಯ ಸೂಚನೆ/ಮಾರ್ಗದರ್ಶನಗಳನ್ವಯ ಜರುಗಿಸಿ ಪೂರ್ಣಗೊಳಿಸಲಾಗಿರುತ್ತದೆ, ಹಾಗೂ ಎರಡನೇಯ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಸರ್ಕಾರದ/ಯು.ಜಿ.ಸಿ.ಯ ಸೂಚನೆ/ಮಾರ್ಗದರ್ಶನಗಳನ್ವಯ ತೇರ್ಗಡೆಗೊಳಿಸುವ ಪ್ರಕ್ರಿಯೆ ಜರುಗಿಸಲಾಗುವುದಾಗಿ ತಿಳಿಸಿದರು. ರಾಜ್ಯ ಹಾಗೂ ರಾಷ್ಟ್ರ ಮಟ್ಟದ ವೆಬಿನಾರಗಳನ್ನು ಜರುಗಿಸಿ ಇ-ಪ್ರಮಾಣ ಪತ್ರಗಳನ್ನು ವಿತರಿಸಲಾಗಿರುತ್ತದೆ. ಪಂಚಾಯತ ರಾಜ್ ಸಂಸ್ಥೆಯ ವಿವಿಧ ಸ್ತರದ ಪ್ರತಿನಿಧಿಗಳು ಹಾಗೂ ಸಿಬ್ಬಂದಿಗಳಿಗೆ ತರಬೇತಿ ನೀಡಲು ಅಬ್ದುಲ್ ನಜೀರ್ ಸಾಬ್ ಎಸ.ಐ.ಆರ್.ಡಿ. ಸಂಸ್ಥೆ, ಮೈಸೂರು ಹಾಗೂ ಇತರೆ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಈಗಾಗಲೇ ಸಮಾಲೋಚನೆ ನಡೆಸಿ ಸೂಕ್ತ ಕ್ರಮ ಜರುಗಿಸಲಾಗುತ್ತಿದೆ ಎಂದರು. ಇದರ ಜೊತೆಗೆ

ಮಾದರಿ ಸಸ್ಯ ಶಿಶುಪಾಲನಾ ಕೇಂದ್ರ (ನರ್ಸರಿ), ಪ್ರಾಯೋಗಿಕ ಕೃಷಿ ಚಟುವಟಿಕೆಗಳು, "ನೈಪುಣ್ಯ ಕೇಂದ್ರ" ಪ್ಲೇಸಮೆಂಟ್ ಸೆಲ್ ಚಟುವಟಿಕೆಗಳು, ಆಂತರಿಕ ಗುಣಮಟ್ಟ ಭರವಸೆ ಕೋಶ, ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗಾಗಿ "ಆತ್ಮವಿಶ್ವಾಸ" ಕೇಂದ್ರ, ಸಾಬರಮತಿ ಪ್ರತಿಕೃತಿ ಕಟ್ಟಡದ ಹಿಂಬದಿ ಜಾಗೆಯನ್ನು ಹಸಿರಾಗಿಸಲು "ಸ್ಮೃತಿ ವನ", ನೂತನ ಆವರಣದಲ್ಲಿ "ಜೈವಿಕ ಇಂಧನ" ಉದ್ಯಾನ, ಪ್ರತಿ ಶುಕ್ರವಾರದಂದು "ಖಾದಿ ದಿನ" ದ ಆಚರಣೆ, ವಿವಿಧ ಸಂಸ್ಥೆಗಳೊಂದಿಗೆ ಒಡಂಬಡಿಕೆ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿರುವುದಾಗಿ ತಿಳಿಸಿದರು. ದಿನಾಂಕ:೩೦-೦೭-೨೦೨೦ ರಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆಯ ಸಚಿವರಾದ, ಶ್ರೀ ಕೆ.ಎಸ್.ಈಶ್ವರಪ್ಪ ನವರು, ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿದರು. ಅವರು ನೂತನ ಕ್ಯಾಂಪಸ ನಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಕಟ್ಟಡ ಕಾಮಗಾರಿಗಳ ವೀಕ್ಷಣೆ ಮಾಡಿ, ವಿಶ್ವವಿದ್ಯಾಲಯದ ಸಿಬ್ಬಂದಿಗಳ ಜೊತೆ ಸಮಾಲೋಚನಾ ಸಭಾ ಜರುಗಿಸಿ, ವಿಶ್ವವಿದ್ಯಾಲಯದ ಕಾರ್ಯನಿರ್ವಹಣೆಯ ಕುರಿತು ಸಂತಸ ವ್ಯಕ್ತಪಡಿಸಿರುವುದಾಗಿ ಸಭೆಯ ಗಮನಕ್ಕೆ ತಂದರು. ಮಾನ್ಯ ಸಚಿವರ ಜೊತೆಗೆ, ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ.ಎಲ್.ಕೆ.ಅತೀಕ್, ಗ್ರಾಮೀಣಾಭಿವೃದ್ಧಿ ಇಲಾಖೆಯ ಆಯುಕ್ತರಾದ ಶ್ರೀಮತಿ ಪ್ರಿಯಾಂಕಾ ಮೇರಿ ಫ್ರಾನ್ಸಿಸ್, ಇವರು ಸಹ ಉಪಸ್ಥಿತರಿದ್ದು ಸಭೆಯಲ್ಲಿ ಭಾಗವಹಿಸಿರುವುದಾಗಿ ತಿಳಿಸಿದರು.

ಮುಂದಿನ ದಿನಮಾನಗಳಲ್ಲಿ ವಿಶ್ವವಿದ್ಯಾಲಯವನ್ನು ಇನ್ನೂ ಹೆಚ್ಚು ಅಭಿವೃದ್ಧಿಪಡಿಸಲು, ಕುಲಪತಿಗಳು ಎಲ್ಲ ಸದಸ್ಯರ ಸಹಕಾರ ಮತ್ತು ಸಹಯೋಗವನ್ನು ಕೋರಿದರು. ಸದರಿ ಚಟುವಟಿಕೆಗಳ ಕುರಿತು, ಸದಸ್ಯರ ಅಭಿಪ್ರಾಯ ಕೋರಿದರು.

- ಡಾ.ಜೀವನ್ ಕುಮಾರ್ ಇವರು ಮಾತನಾಡುತ್ತ ಹಸಿರುಕರಣಗೊಳಿಸುವ, ಖಾದಿ ಬಳಕೆ ಹಾಗೂ ಇತರೆ ಉಪಕ್ರಮಗಳ ಕುರಿತು ಆತ್ಮೀಯವಾಗಿ ಪ್ರಶಂಸಿಸಿದರು.
- ಪ್ರೊ. ಅಜ್ಜಪ್ಪ ಅಳಗವಾಡಿ ಯವರು, ಸದರಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಒಳ್ಳೆಯ ಪ್ರಯತ್ನವಾಗುತ್ತಿರುವುದಾಗಿ ತಿಳಿಸದರು.
- ಎನ್.ಸಿವಣ್ಣ ಇವರು ಮಾತನಾಡುತ್ತ ತಮಿಳುನಾಡಿನ "ಗಾಂಧೀ ಗ್ರಾಮ" ಸಂಸ್ಥೆಯೊಂದಿಗೆ ಹಾಗೂ Institute of Rural Management (IRMA) ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಕ್ರಮ ಜರುಗಿಸಬಹುದಾಗಿದೆ ಎಂದು ತಿಳಿಸಿದರು.
- ಪ್ರೊ. ಸುರೇಶ ಕೃಷ್ಣರಾವ್ ಇವರು ಮಾತನಾಡುತ್ತ ವಿವಿಧ ಕಾರ್ಯಗಳಿಗೆ ಅಭಿನಂದನೆ ಸಲ್ಲಿಸಿದರು. ಜೊತೆಗೆ ಸಾರ್ವಜನಿಕ ಆರೋಗ್ಯ, ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸಾಮಾಜಿಕ ಕಾರ್ಯ ವಿಭಾಗಗಳ ಮಧ್ಯ ಸಮನ್ವಯತೆ ಸಾಧಿಸಿ ಸಮಗ್ರ ಪ್ರಾಥಮಿಕ ಆರೋಗ್ಯದ ಕುರಿತು ಹೆಚ್ಚು ಒತ್ತು ನೀಡಬೇಕು ಎಂದು ಸಲಹೆ ನೀಡಿದರು. ವಿದ್ಯಾರ್ಥಿಗಳು ಹಾಗೂ ಬೋಧಕ ಸಿಬ್ಬಂದಿಯವರು ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರ ಮುಖಾಂತರ ಕಲಿಯುವಂತಾಗಬೇಕು ಎಂದು ತಿಳಿಸುತ್ತ, ಪ್ರತಿಯುಬ್ಬ ವಿದ್ಯಾರ್ಥಿಯು ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ೨೦ ಕುಟುಂಬಗಳ ಕುರಿತು ಅಧ್ಯಯನ ಕೈಗೊಳ್ಳಬೇಕೆಂದು ತಿಳಿಸಿದರು.
- ಪ್ರೊ. ಗೋಪಾಲ್ ನಾಯಕ ಇವರು ಮಾತನಾಡುತ್ತ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಜೊತೆಗೆ ಒಡಂಬಡಿಕೆ ಮಾಡಿಕೊಳ್ಳುವುದು ಸೂಕ್ತ ಎಂದು ತಿಳಿಸಿದರು. ಇದರ ಜೊತೆಗೆ, ವಿಶ್ವವಿದ್ಯಾಲಯದಲ್ಲಿನ ಪ್ರವೇಶಾತಿ ಹಾಗೂ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳ ಕುರಿತಾಗಿ ಮಾಹಿತಿ ಕೇಳಿದರು. ಗ್ರಾಮೀಣ ಭಾಗದಲ್ಲಿ ಆನಲೈನ್ ತರಗತಿಗಳಿಂದ ವಿದ್ಯಾರ್ಥಿಗಳಿಗೆ ಅನಾನುಕೂಲತೆ ಉಂಟಾಗಿರಬಹುದಾದ ಕುರಿತು ಅಭಿಪ್ರಾಯ ಕೇಳಿದರು. ಅದಕ್ಕೆ ಕುಲಪತಿಗಳು ಮಾತನಾಡುತ್ತ, ಪ್ರವೇಶಾತಿ ಕುರಿತು ವಿವರಿಸಿದರು ಹಾಗೂ ಆನಲೈನ್ ತರಗತಿಗಳ ಪ್ರಕ್ರಿಯೆಯನ್ನು ಇನ್ನೂ ಸಂಸ್ಕರಿಸಬೇಕಾದ ಅಗತ್ಯವಿರುವುದಾಗಿ ತಿಳಿಸಿದರು.

- ಶ್ರೀಮತಿ ನೀತಿ ಶರ್ಮಾ ರವರು ಮಾತನಾಡುತ್ತ, ವಿದ್ಯಾರ್ಥಿಗಳಿಗೆ ಕಾರ್ಯಗಳನ್ನು ಹಂಚಿಕೆ ಮಾಡಿ, ಅವರಿಂದ ಪ್ರಾಜೆಕ್ಟ್ ರಿಪೋರ್ಟ, ಇತ್ಯಾದಿ ಸಿದ್ಧಪಡಿಸಲು ತಿಳಿಸಬೇಕು, ಜೊತೆಗೆ Content Management System ಇತ್ಯಾದಿ ಅಭಿವೃದ್ಧಿಪಡಿಸಬೇಕೆಂದು ವಿವರಿಸಿದರು.
- ಶ್ರೀ ಮೀನಾಕ್ಷಿ ಸುಂದರಮ್ ಇವರು ಆನಲೈನ್ ತರಗತಿಗಳ ಕುರಿತಂತೆ ವಿದ್ಯಾರ್ಥಿಗಳ ಪ್ರತಿಕ್ರಿಯೆ ಕುರಿತು ಕೇಳಿದಾಗ, ಕುಲಪತಿಗಳು, ಲಾಕಡೌನ್ ಸಮಯದಲ್ಲಿ, ಆನಲೈನ್ ತರಗತಿಗಳು, ವಿದ್ಯಾರ್ಥಿಗಳನ್ನು ಕಲಿಕೆಯಿಂದ ದೂರ ಉಳಿಯುವಂತೆ ಮಾಡಲಿಲ್ಲವಾದ್ದರಿಂದ, ಅವರು ತೃಪ್ತಿಕರವಾಗಿ ಅಭ್ಯಾಸ ಮಾಡಲು ಅನುಕೂಲವಾಗಿರುವುದಾಗಿ ತಿಳಿಸಿದರೆಂದು ಸಭೆಗೆ ವಿವರಿಸಿದರು. ಮುಂದುವರೆದು, ಸರ್ಕಾರದ/ಯು.ಜಿ.ಸಿ. ನಿಯಮಗಳನುಸಾರ ಸೆಪ್ಟೆಂಬರ್ ೧ ರಿಂದ ೧೦ ನೇ ತಾರೀಕಿನವರೆಗೆ, ವಿದ್ಯಾರ್ಥಿಗಳಿಗೆ ಪುನರಾವಲೋಕನ ತರಗತಿಗಳನ್ನು ತೆಗೆದುಕೊಂಡಿದ್ದರಿಂದ ಅವರಿಗೆ ಅಧ್ಯಯನದಲ್ಲಿ ಮತ್ತಷ್ಟು ಅನುಕೂಲವಾಗಿರುವುದಾಗಿ ತಿಳಿಸಿದರು.

ಸದರಿ ಚರ್ಚೆಯ ಹಾಗೂ ವಿವರಣೆಯ ನಂತರ ಕಾರ್ಯಸೂಚಿಯನ್ನು ಕೈಗೆತ್ತಿಗೊಳ್ಳಲಾಯಿತು.

**ವಿಷಯ ಸಂಖ್ಯೆ 1: ದಿನಾಂಕ 13–01–2020 ರಂದು ಜರುಗಿದ 4ನೇ ಶೈಕ್ಷಣಿಕ ಪರಿಷತ್ತಿನ ಸಭೆಯ ನಡವಳಿಗಳನ್ನು ಸ್ಥಿರೀಕರಿಸುವ ಬಗ್ಗೆ.**

**Subject No.1: Confirmation of the Proceedings of the Fourth meeting Academic Council held on 13-01-2020.**

**ಪರಾಮರ್ಶನ ಟಿಪ್ಪಣಿ**

ದಿನಾಂಕ 13–01–2020 ರಂದು ಜರುಗಿದ 4ನೇ ಶೈಕ್ಷಣಿಕ ಪರಿಷತ್ತಿನ ಸಭೆಯ ನಡವಳಿಯನ್ನು ಎಲ್ಲಾ ಸದಸ್ಯರಿಗೆ ಕಳುಹಿಸಿಕೊಡಲಾಗಿದೆ. ಸದರಿ ನಡವಳಿಗೆ ಸದಸ್ಯರಿಂದ ಆಕ್ಷೇಪಣೆಗಳು ಅಥವಾ ತಿದ್ದುಪಡಿಗಳು ಬಾರದೇ ಇರುವುದರಿಂದನಡವಳಿಗಳು ಸ್ಥಿರೀಕರಣಗೊಂಡಂತಾಗಿವೆ.

**:: ನಿರ್ಣಯ::**

ದಿನಾಂಕ 13–01–2020 ರಂದು ಜರುಗಿದ 4ನೇ ಶೈಕ್ಷಣಿಕ ಪರಿಷತ್ತಿನ ಸಭೆಯ ನಡವಳಿಗೆ ಸದಸ್ಯರಿಂದ ಆಕ್ಷೇಪಣೆಗಳು ಅಥವಾ ತಿದ್ದುಪಡಿಗಳು ಬಾರದೇ ಇರುವುದರಿಂದ ನಡವಳಿಗಳು ಸ್ಥಿರೀಕರಿಸಲಾಯಿತು.

**ವಿಷಯ ಸಂಖ್ಯೆ 2: ದಿನಾಂಕ 06–08–2020 ಮತ್ತು 20–08–2020 ರಂದು ಜರುಗಿದ ನವೀಕರಿಸಬಹುದಾದ ಇಂಧನ (Renewable Energy) ಸ್ನಾತಕೋತ್ತರ ಡಿಪ್ಲೊಮ ಪದವಿಯ ಪಠ್ಯ ವಿಷಯಗಳನ್ನು ವಿನ್ಯಾಸಗೊಳಿಸಲು ನಡೆದ ತಜ್ಞರ ಸಮಿತಿ ಸಭೆಯ ನಡವಳಿಗಳನ್ನು ಪರಿಗಣಿಸಿ ಅನುಮೋದಿಸುವ ಬಗ್ಗೆ.**

**Subject 2: To consider and approve the Proceedings of the Expert Committee meetings held on 06-08-2020 and 20-08-2020 to Design and Draft the course Contents of Post Graduate Diploma Programme in Renewable Energy to be jointly organised by Mahatma Gandhi Institute of Rural Energy and Development (MGIRED) at Bengaluru.**

**ಪರಾಮರ್ಶನ ಟಿಪ್ಪಣಿ:**

ದಿನಾಂಕ 06–08–2020 ಮತ್ತು 20–08–2020 ರಂದು ಜರುಗಿದ ನವೀಕರಿಸಬಹುದಾದ ಇಂಧನ ಸ್ನಾತಕೋತ್ತರ ಡಿಪ್ಲೊಮ ಪದವಿಯ ಪಠ್ಯ ವಿಷಯಗಳನ್ನು ವಿನ್ಯಾಸಗೊಳಿಸಲು ನಡೆದ ತಜ್ಞರ ಸಮಿತಿ ಸಭೆಯ ನಡವಳಿಗಳನ್ನು28–08–2020ರಂದು ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನಲ್ಲಿ ಸದಸ್ಯರು ಅನುಮೋದಿಸಿದ್ದು, ಶೈಕ್ಷಣಿಕ ಪರಿಷತ್ತಿನ ಪರಿಗಣನೆಗೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ. ಸದರಿ ನಡವಳಿಗಳ ಪ್ರತಿಯನ್ನು ಲಗತ್ತಿಸಲಾಗಿದೆ.

:: ನಿರ್ಣಯ::

ತಜ್ಞರ ಸಮಿತಿ ಸಭೆಯ ಸದಸ್ಯರುಗಳ ವಿವರ ಹಾಗೂ ಸಭೆಯ ತೀರ್ಮಾನಗಳ ಬಗ್ಗೆ ಅಧ್ಯಕ್ಷರು ಶೈಕ್ಷಣಿಕ ಪರಿಷತ್ತಿನ ಸಭೆಗೆ ವಿವರಿಸಿದರು.

ಮಾನ್ಯ ಕುಲಪತಿಗಳು ಮೇಲಿನ ವಿಷಯದ ಬಗ್ಗೆ ವಿವರಿಸುತ್ತ, ಈ ಹಿಂದಿನ ಕುಲಪತಿಗಳಾದ ಪ್ರೊ. ಬಿ. ತಿಮ್ಮೇಗೌಡ, ಕುಲಸಚಿವರಾದ ಪ್ರೊ. ಸುರೇಶ್ ವಿ.ನಾಡಗೌಡ ಹಾಗೂ ಅವರು Mahatma Gandhi Institute of Rural Energy and Development (MGIRED) ಗೆ ಭೇಟಿ ಕೊಟ್ಟು ಅಲ್ಲಿನ ಪ್ರಯೋಗಾಲಯ ಹಾಗೂ ಇತರೆ ಸೌಲಭ್ಯವನ್ನು ಪರಿಶೀಲಿಸಲಾಗಿದ್ದು, ಸದರಿ ಕಾರ್ಯಕ್ರಮವನ್ನು MGIRED ಸಂಸ್ಥೆಯಲ್ಲಿ, ಅವರ ಸಹೋಗದೊಂದಿಗೆ, ಲಭ್ಯವಿರುವ ಪ್ರಯೋಗಾಲಯವನ್ನು ಉಪಯೋಗಿಸಿಕೊಂಡು ಬೆಂಗಳೂರಿನಲ್ಲಿಯೇ ಪ್ರಾರಂಭಿಸಲಾಗುವುದು ಎಂದು ಸಭೆಗೆ ವಿವರಿಸಿದರು. ತಜ್ಞರ ಸಮಿತಿಯ ಸಲಹೆ ಹಾಗೂ BOS ಮೀಟಿಂಗ್‌ನ ಸಲಹೆಯಂತೆ ಪಿ.ಜಿ.ಡಿಪ್ಲೋಮಾ Renewable Energy ಪ್ರೊಗ್ರಾಮಿನ ಕೋರ್ಸ್ ರಚಿಸಲಾಗಿರುವುದಾಗಿ ತಿಳಿಸಿದರು.

ಡಾ. ಸುರೇಶ್ ಕೃಷ್ಣರಾವ್, ಗೌರವ ಪ್ರಾಧ್ಯಾಪಕರು ಇದಕ್ಕೆ ಸಂಬಂಧಿಸಿ ಸಲಹೆ ನೀಡುತ್ತ Renewable energy ಪ್ರೊಗ್ರಾಮಿನ ಕೋರ್ಸ್‌ನಲ್ಲಿ ಹೆಚ್ಚು ಪ್ರಾಯೋಗಿಕ ಅಂಶವನ್ನು ಸೇರಿಸಬೇಕು. ಉದಾಹರಣೆಗೆ ಆರೋಗ್ಯ ಕ್ಷೇತ್ರದಲ್ಲಿ ಸೌರ ವಿದ್ಯುತ್ ಬಳಕೆ, ಕೃಷಿ ಉತ್ಪಾದನೆಗೆ ಕೋಲ್ಡ್ ಸ್ಟೋರೇಜ್ ಚೈನ್‌ಗಳಲ್ಲಿ ಸೌರ ಶಕ್ತಿ ಬಳಕೆ ಹಾಗೂ ಗ್ರಾಮೀಣ ಭಾಗಗಳಲ್ಲಿ ವಿದ್ಯುತ್ ಕೊರತೆ ಇರುವುದರಿಂದ ಅಲ್ಲಿನ ಸೌರ ದೀಪದ ವ್ಯವಸ್ಥೆ ಮುಂತಾಗಿ ಹೆಚ್ಚು ಗ್ರಾಮೀಣ ಭಾಗಕ್ಕೆ ಉಪಯೋಗವಾಗುವ ಹಾಗೆ ವಿದ್ಯಾರ್ಥಿಗಳಿಗೆ ತರಬೇತಿ ನೀಡಬೇಕು ಎಂದು ಹೇಳಿದರು. ಇದಕ್ಕೆ ಉತ್ತರವಾಗಿ ಮಾನ್ಯ ಸಭಾಧ್ಯಕ್ಷರು ಈಗಾಗಲೇ ಪ್ರಥಮ ಸೆಮಿಸ್ಟರ್‌ನಲ್ಲಿ ಸೌರ ಶಕ್ತಿಯ ಬಗ್ಗೆ ವಿಷಯಗಳು ಹಾಗೂ

ಪ್ರಯೋಗಾಲಯ ಇರುವುದರಿಂದ ಸೌರ ಶಕ್ತಿಯ ಪ್ರಾಯೋಗಿಕ ತರಬೇತಿ ಕೂಡ ನೀಡಲಾಗುವುದು ಎಂದು ತಿಳಿಸಿದರು.

ಪ್ರೊ ಗೋಪಾಲ ನಾಯಕ್, ಡೀನ್, ಆರ್ಥಿಕ ಮತ್ತು ಸಮಾಜ ವಿಜ್ಞಾನ ವಿಭಾಗ, ಐ.ಐ.ಎಮ್, ಬೆಂಗಳೂರು, ಇವರು ಮಾತನಾಡುತ್ತ ನವೀಕರಿಸಬಹುದಾ ಇಂಧನ ಉತ್ಪನ್ನಗಳನ್ನು ಆರ್ಥಿಕವಾಗಿ ಕಾರ್ಯಸಾಧ್ಯ(economically viable) ಮಾಡುವ ತರಬೇತಿಯನ್ನು ಕೂಡ ನೀಡಬೇಕು ಎಂದು ತಿಳಿಸಿದರು. ಇದಕ್ಕೆ ಉತ್ತರಿಸುತ್ತ ಅಧ್ಯಕ್ಷರು ಎರಡನೇ ಸೆಮಿಸ್ಟರ್‌ನಲ್ಲಿ ಗ್ರಾಮೀಣ ಮತ್ತು ಸುಸ್ಥಿರ ಇಂಧನ ತಾಂತ್ರಿಕತೆಗಳು ಹಾಗೂ ಆರ್ಥಿಕತೆ ದೃಷ್ಟಿಯಲ್ಲಿ ಅಧ್ಯಾಯಗಳನ್ನು ಅಳವಡಿಸಿರುವುದಾಗಿ ತಿಳಿಸಿದರು. ಶೈಕ್ಷಣಿಕ ಪರಿಷತ್ತು ಬಯಸಿದರೆ BOS ಮೀಟಿಂಗ್ ನಲ್ಲಿಟ್ಟು ಕೋರ್ಸ್‌ನ ಒಂದು ಪ್ರತ್ಯೇಕ ವಿಷಯವಾಗಿ ಸೇರಿಸಲಾಗುವುದು ಎಂದು ಹೇಳಿದರು.

ಪ್ರೊ. ಪಿ.ಪಿ.ನಾಗೇಶ್ವರ್ ರಾವ್, ಇವರು, ಸದರಿ ಕೋರ್ಸನ್ನು ಉತ್ತಮವಾಗಿ ವಿನ್ಯಾಸಗೊಳಿಸಲಾಗಿದ್ದು, ಇದನ್ನು ಒಪ್ಪಬಹುದಾಗಿದೆ ಹಾಗೂ ಪ್ರಾರಂಭಗೊಳಿಸಬಹುದಾಗಿದೆ ಎಂದು ಸಭೆಗೆ ತಿಳಿಸಿದರು.

ಮೇಲಿನ ಚರ್ಚೆ ಹಾಗೂ ಸಲಹೆಗಳೊಂದಿಗೆ ಸದರಿ ವಿಷಯವನ್ನು ಅನುಮೋದಿಸಲು ಶೈಕ್ಷಣಿಕ ಪರಿಷತ್ತು ನಿರ್ಣಯಿಸಿತು.

**ವಿಷಯ ಸಂಖ್ಯೆ 3: ವಿಶ್ವವಿದ್ಯಾಲಯದ 2020-21ನೇ ಶೈಕ್ಷಣಿಕ ಸಾಲಿಗೆ ವಿವಿಧ ಪ್ರೋಗ್ರಾಮಗಳ ಪ್ರವೇಶ ಹಾಗೂ ಪರೀಕ್ಷಾ ಶುಲ್ಕ, ಅರ್ಹತಾ ಮಾನದಂಡಗಳು, ಮತ್ತು ಪ್ರವೇಶಕ್ಕಾಗಿ ಮಾರ್ಗಸೂಚಿಗಳು, ಪ್ರವೇಶಾತಿ ಅಧಿಸೂಚನೆಯ ವಿಷಯಗಳನ್ನು ಪರಿಗಣಿಸುವ ಬಗ್ಗೆ.**

**Subject No 3: To Consider the Admission and Examination Fee Structure, EligibilityCriteria, Guidelines for Admission and Admission Notification of theUniversity-reg.**

**ಪರಾಮರ್ಷನ ಟಿಪ್ಪಣಿ:**

ವಿಶ್ವವಿದ್ಯಾಲಯದ 2020-21ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳು ಪ್ರಾರಂಭಿಸುವ ಕುರಿತು ವಿಶ್ವವಿದ್ಯಾಲಯದ ಅಧಿನಿಯಮ ಪ್ರಕರಣ 5(VII), 57, ಹಾಗೂ 72 ರನ್ವಯ, ಕುಲಪತಿಗಳು ಅನುಬಂಧ-1 ಪ್ರಥಮ ವರ್ಷದ, ಅನುಬಂಧ-2 ದ್ವಿತೀಯ ವರ್ಷದ ಪ್ರವೇಶ ಹಾಗೂ ಪರೀಕ್ಷಾ ಶುಲ್ಕ, ಅನುಬಂಧ-3 ಅರ್ಹತಾ ಮಾನದಂಡಗಳು ಮತ್ತು ಅನುಬಂಧ-4 ಪ್ರವೇಶಕ್ಕಾಗಿ ಮಾರ್ಗಸೂಚಿಗಳನ್ನು ಹಾಗೂ ಅನುಬಂಧ-5 ಪ್ರವೇಶಾತಿ ಅಧಿಸೂಚನೆಯನ್ನು ವಿಶ್ವವಿದ್ಯಾಲಯದ ಅಧಿಕಾರಿಗಳ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಿದಂತೆ ಹಾಗೂ K.S.R.D.P.R UNIVERSITY ORDINANCES GOVERNING THE ADMISSION OF STUDENTS TO THE VARIOUS COURSES, PAYMENT OF FEES, SCHOLARSHIP, CONDUCT AND RESIDENCE OF STUDENTS, 2019. ಗಳ ಪ್ರಕಾರ ಅಧಿಸೂಚಿಸಲಾಗಿರುತ್ತದೆ. ಸದರಿ ಅಧಿಸೂಚನೆಗಳ ಪ್ರತಿಗಳನ್ನು ಅನುಬಂಧ 1 ರಿಂದ 5 ರಲ್ಲಿ ಲಗತ್ತಿಸಲಾಗಿದೆ.

ಸದರಿ ವಿಷಯವನ್ನು 28–08–2020ರಂದು ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನಲ್ಲಿ ಸದಸ್ಯರು ಅನುಮೋದಿಸಲಾಗಿರುತ್ತದೆ. ಅದರಂತೆ, ಪ್ರವೇಶಾತಿಗೆ ಸಂಬಂಧಪಟ್ಟ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಸದರಿ ವಿಷಯವನ್ನು ಶೈಕ್ಷಣಿಕ ಪರಿಷತ್ತಿನ ಅವಗಾಹನೆ ಮತ್ತು ಅನುಸಮರ್ಥನೆಗಾಗಿ ಮಂಡಿಸಲಾಗಿದೆ.

:: ನಿರ್ಣಯ::

ಸದರಿ ವಿಷಯದ ಕುರಿತು ಕುಲಸಚಿವರು ಪ್ರವೇಶ ಶುಲ್ಕದಲ್ಲಿ ಯಾವುದೇ ಬದಲಾವಣೆ ಇಲ್ಲದೇ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಪ್ರವೇಶಾತಿಗೆ ಅಭ್ಯರ್ಥಿಗಳ ಸಕಾರಾತ್ಮಕ ಪ್ರತಿಕ್ರಿಯೆ ಇದೆ ಎಂದು ವಿವರಿಸಿದರು. ಕುಲಪತಿಗಳು ಮೇಲಿನ ವಿಷಯವನ್ನು ವಿವರಿಸುತ್ತ ನಮ್ಮ ವಿಶ್ವವಿದ್ಯಾಲಯವು ಕರ್ನಾಟಕದಲ್ಲಿ ಪ್ರವೇಶಾತಿ ಅಧಿಸೂಚನೆಯನ್ನು ಬಹುಬೇಗ ಹೊರಡಿಸಿತು. ಬೇರೆ ರಾಜ್ಯದ ವಿದ್ಯಾರ್ಥಿಗಳನ್ನು ಸೆಳೆಯುವಲ್ಲಿ ನಮ್ಮ ವಿಶ್ವವಿದ್ಯಾಲಯ ಯಶಸ್ವಿಯಾಗಿದೆ.ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ 300ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಪ್ರವೇಶಾತಿ ಮಾಡಿಕೊಳ್ಳುವ ಭರವಸೆ ಇದೆ. ವಿಶ್ವವಿದ್ಯಾಲಯದ 3 (ಜಿಯೋಇನ್ಫೋಮೇಟಿಕ್ಸ್, ಎಮ್.ಪಿ.ಹೆಚ್, ಎಫ್.ಎಸ್.ಟಿ) ಪ್ರೋಗ್ರಾಮಗಳಿಗೆ ತುಂಬಾ ಬೇಡಿಕೆ ಇದೆ ಎಂದು ತಿಳಿಸಿದರು.

ಡಾ. ನಾಗೇಶ್ವರ್ ರಾವ್, ಗೌರವ ಪ್ರಾಧ್ಯಾಪಕರು ಇದಕ್ಕೆ ಸಂಬಂದಿಸಿದಂತೆ ಎಮ್.ಎಸ್ಸಿ ಗಣಕ ವಿಜ್ಞಾನ(ಡೇಟಾ ಅನಾಲಿಟಿಕ್ಸ್) ಹಾಗೂ ಎಮ್.ಎಸ್ಸಿ ಜಿಯೋಇನ್ಫೋಮೇಟಿಕ್ಸ್ ವಿಭಾಗದವರು ಪರಸ್ಪರ ಒಗ್ಗೂಡಿ ಕೆಲಸ ಮಾಡಿದರೆ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ಎಂದು ಸಲಹೆ ನೀಡಿದರು.

ಪ್ರೊ ಗೋಪಾಲ ನಾಯಕ್, ಇವರು, ಕಳೆದ ಮೂರು ವರ್ಷಗಳ ಪ್ರವೇಶಾತಿಗಳ ದತ್ತಾಂಶಗಳನ್ನು ತುಲನಾತ್ಮಕವಾಗಿ ಅಧ್ಯಾಯ ಮಾಡಿ, ವಿಶ್ಲೇಷಿಸುವುದು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ, ಹೆಚ್ಚು ಬೇಡಿಕೆ ಇರುವ ಕಾರ್ಯಕ್ರಮಗಳ, ಸೀಟ್ ಗಳನ್ನು, ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ಸಂಪನ್ಮೂಲಗಳ ಆಧಾರದ ಮೇರೆಗೆ ಅಗತ್ಯಕ್ಕೆ ತಕ್ಕಂತೆ ಪ್ರಸ್ತುತ ಸಾಲಿನಿಂದಲೇ, ಹೆಚ್ಚಿಸಿಕೊಳ್ಳಬಹುದು ಎಂದರು. ಇದಕ್ಕೆ, ಇತರ ಸದಸ್ಯರು ಸಹಮತಿ ವ್ಯಕ್ತಪಡಿಸಿ, ಕುಲಪತಿಗಳು, ಅವರ ಹಂತದಲ್ಲಿ, ಇದಕ್ಕೆ ಸಂಬಂಧಟ್ಟಂತೆ ಸೂಕ್ತ ನಿರ್ಧಾರ ತೆಗೆದುಕೊಳ್ಳಲು ತಿಳಿಸಿದರು.

ಡಾ. ಸುರೇಶ್ ಕ್ರಷ್ಣರಾವ್, ಗೌರವ ಪ್ರಾಧ್ಯಾಪಕರು, ಎಮ್.ಎಸ್.ಡಬ್ಲ್ಯೂ, ಎಮ್.ಪಿ.ಹೆಚ್ ಹಾಗೂ ಎಮ್.ಎಸ್ಸಿ (ಎಫ್.ಎಸ್.ಟಿ) ವಿಭಾಗಗಳು ಸಮನ್ವಯ ಸಾಧಿಸಿ, ಒಟ್ಟಾಗಿ ಕೆಲಸ ಮಾಡಬೇಕು. ಇದರಿಂದ ಗ್ರಾಮೀಣ ಜನರ ಸಾಮಾಜಿಕ ಹಾಗೂ ಆರೋಗ್ಯದ ಕಡೆಗೆ ಹೆಚ್ಚು ಗಮನ ನೀಡಿ ಸುಧಾರಣೆಗೆ ಸೂಕ್ತ ಉಪಕ್ರಮಗಳನ್ನು ತೆಗೆದುಕೊಳ್ಳಬಹುದು ಎಂದು ಹೇಳಿದರು. ಇದಕ್ಕೆ ಕುಲಪತಿಗಳು ಮಾತನಾಡುತ್ತ, ಡಾ.ಗೀತಾ ಬಂಗಾರಿ, ಎಮ್.ಎಸ್.ಡಬ್ಲ್ಯೂ ಕಾರ್ಯಕ್ರಮ ಸಂಯೋಜಕರು, ಇವರನ್ನು ಸಮನ್ವಯಾಧಿಕಾರಿಯಾಗಿ ನೇಮಿಸಿ, ಇದಕ್ಕೆ ಕುರಿತಂತೆ, ರೂಪುರೇಷೆಗಳನ್ನು ನಿಗದಿಪಡಿಸಲು, ಪ್ರತ್ಯೇಕವಾಗಿ ಸಭೆ ಆಯೋಜಿಸಬಹುದಾಗಿದೆ ಎಂದು ಸಲಹೆ ನೀಡಿದರು.

ಮೇಲಿನ ಚರ್ಚೆ ಹಾಗೂ ಸಲಹೆಗಳನ್ನು ಪರಿಗಣಿಸಿ, ಅದರಂತೆ ಸದರಿ ವಿಷಯವನ್ನು ಶೈಕ್ಷಣಿಕ ಪರಿಷತ್ತು ಅನುಮೋದಿಸಲು ನಿರ್ಣಯಿಸಿತು.

**ವಿಷಯ ಸಂಖ್ಯೆ 4: 2019–20 ಸಾಲಿನ ಸ್ನಾತಕೋತ್ತರ ಪದವಿಯ 4ನೇ ಸೆಮಿಸ್ಟರ್ ಪರೀಕ್ಷಾ ಅಧಿಸೂಚನೆ ಮತ್ತು ಪರೀಕ್ಷಾ ವೇಳಾಪಟ್ಟಿಯನ್ನು ಅನುಮೋದಿಸುವುದು, 2019–20 ಸಾಲಿನ 2ನೇ ಸೆಮಿಸ್ಟರ್ ವಿದ್ಯಾರ್ಥಿಗಳನ್ನು ತೇರ್ಗಡೆಗೊಳಿಸುವ ಕುರಿತು ಹಾಗೂ 2020–21 ವರ್ಷದ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸುವ ಬಗ್ಗೆ.**

**Subject No. 4: To consider Examination Notification and Examination Schedule for Fourth Semester (PG) 2019-20, Modalities for promoting Second Semester(PG) 2019-20 students, Commencement of activities for academic year 2020-21.**

**ಪರಾಮರ್ಷನ ಟಿಪ್ಪಣಿ:**–ವಿಶ್ವವಿದ್ಯಾಲಯದಲ್ಲಿ, ೨೦೧೯–೨೦ನೇ ಶೈಕ್ಷಣಿಕ ವರ್ಷದ ಕೊನೆಯ ಸೆಮಿಸ್ಟರ್ ಪರೀಕ್ಷೆಗಳನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ (ಎಂಎಚ್ಆರ್‌ಡಿ) / ಗೃಹ ಸಚಿವಾಲಯ (ಎಂಎಚ್‌ಎ) / ರಾಜ್ಯ ಸರ್ಕಾರ ಮತ್ತು ಯುಜಿಸಿ ಮಾರ್ಗಸೂಚಿಗಳ ಅನುಸಾರ ನಡೆಸಲು ಕ್ರಮ ಜರುಗಿಸಲಾಗುತ್ತಿದೆ. ೨೦೨೦–೨೧ರ ಶೈಕ್ಷಣಿಕ ವರ್ಷದ ಚಟುವಟಿಕೆಗಳನ್ನು ಪ್ರಾರಂಭಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.ಈ ಕುರಿತಂತೆ ಪತ್ರ ಸಂಖ್ಯೆ RDPR 283 ZPS 2020,dated 04-09-2020ರನ್ವಯ ಸರ್ಕಾರ ಸೂಕ್ತ ವಿಧಾನಗಳನ್ನು ಸೂಚಿಸಿ ಅನುಮೋದನೆ ನೀಡಿರುತ್ತಾರೆ. (ಅನುಬಂಧ ೧, ೨, ೩, ೪, ೫ ಮತ್ತು ೬ ರಲ್ಲಿ ಲಗತ್ತಿಸಲಾಗಿದೆ).ಅದರಂತೆ, ವಿಶ್ವವಿದ್ಯಾಲಯದಲ್ಲಿ ಅಂತಿಮ ಸೆಮೆಸ್ಟರ ವಿದ್ಯಾರ್ಥಿಗಳಿಗೆ ಪರೀಕ್ಷೆಯನ್ನು ಜರುಗಿಸಲಾಗುತ್ತಿದೆ.

ಸದರಿ ವಿಷಯವನ್ನು 28–08–2020ರಂದು ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನಲ್ಲಿ ಸದಸ್ಯರು ಅನುಮೋದಿಸಿದ್ದು, ಶೈಕ್ಷಣಿಕ ಪರಿಷತ್ತಿನ ಅವಗಾಹನೆ ಮತ್ತು ಅನುಸಮರ್ಥನೆಗಾಗಿ ಮಂಡಿಸಲಾಗಿದೆ.

:: ನಿರ್ಣಯ::

ಮೇಲಿನ ವಿಷಯಕ್ಕೆ ಸಂಬಂಧಿಸಿ ಕುಲಸಚಿವರು ಸವಿಸ್ತಾರವಾಗಿ ವಿವರಿಸಿದರು. ಕುಲಪತಿಗಳು ಸದರಿ ವಿಷಯವನ್ನು ಮುಂದುವರಿಸುತ್ತ, ಯು.ಜಿ.ಸಿ.ಮಾರ್ಗಸೂಚಿಯನ್ನು ಅನುಸರಿಸಿ 4ನೇ ಸೆಮಿಸ್ಟರ್ ವಿದ್ಯಾರ್ಥಿಗಳ ಪರೀಕ್ಷೆಗಳನ್ನು ನಡೆಸಲಾಗಿದ್ದು, ಪತ್ರಿಕೆಗಳ ಮೌಲ್ಯಮಾಪನ ಪ್ರಗತಿಯಲ್ಲಿದೆ.ಅದರ ಫಲಿತಾಂಶ ಅಕ್ಟೋಬರ್ 15ರ ಮುನ್ನ ಹೊರಡಿಸವ ಪ್ರಯತ್ನ ವಿಶ್ವವಿದ್ಯಾಲಯ ಮಾಡುತ್ತಿದೆ.2ನೇ ಸೆಮಿಸ್ಟರ್ ವಿದ್ಯಾರ್ಥಿಗಳನ್ನು ಯು.ಜಿ.ಸಿ.ಮಾರ್ಗಸೂಚಿಯ ಅನುಸಾರ ಮುಂದಿನ ಸೆಮಿಸ್ಟರ್‌ಗೆ ಬಡ್ತಿ ನೀಡಲು, ಸೂಕ್ತ ಕ್ರಮ ಜರುಗಿಸಲಾಗುತ್ತಿದೆ. ಜೊತೆಗೆ, ತೃತಿಯ ಸೆಮಿಸ್ಟರ ತರಗತಿಗಳನ್ನು ಅಕ್ಟೋಬರ್ 5 ರಿಂದ ಆನಲೈನ್ ಮುಖಾಂತರ ಆರಂಭಿಸಲಾಗುತ್ತಿದೆ. ಪ್ರಥಮ ಸೆಮೆಸ್ಟರ ತರಗತಿಗಳನ್ನು, ಸರ್ಕಾರ/ ಯು.ಜಿ.ಸಿ ಹೊರಡಿಸುವ ನಿರ್ದೇಶನಗಳನ್ವಯ ಪ್ರಾರಂಭಿಸಲಾಗುವುದಾಗಿ ತಿಳಿಸಿದರು.

ಡಾ. ಎಸ್.ಎಸ್. ಮೀನಾಕ್ಷಿಸುಂದರಂ, ಅಧ್ಯಕ್ಷರು, ಮೈರಾಡಾ, ಇವರು ಮಾತನಾಡುತ್ತ ವಿಶ್ವವಿದ್ಯಾಲಯ ಈ ಕೋವಿಡ್ ಪಿಡುಗಿನ ಪರಿಸ್ಥಿತಿಯನ್ನು ಹೇಗೆ ಎದುರಿಸುತ್ತಿದೆ ಎಂದು ಪ್ರಶ್ನಿಸಿದರು. ಇದಕ್ಕೆ ಉತ್ತರಿಸುತ್ತ ಮಾನ್ಯ ಕುಲಪತಿಗಳು, ಕೋವಿಡ್‌ನಿಂದ ವಿಶ್ವವಿದ್ಯಾಲಯದಲ್ಲಿ ವಾಸ್ತವಿಕವಾಗಿ ಅನೇಕ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ನಿಜ. ವಿಶ್ವವಿದ್ಯಾಲಯದ ಕಾರ್ಯನಿರ್ವಾಹಕ ಅಭಿಯಂತರರಾದ ಶ್ರೀ.ಕೆ.ಆರ್.ಮಠದ್ ಇವರು, ಕೋವಿಡ್ ಸೋಂಕಿನಿಂದ ವಿಧಿವಶರಾದರು. ಹಣಕಾಸು ಅಧಿಕಾರಿಗಳು ಹಾಗೂ ಕೆಲವು ಸಿಬ್ಬಂದಿಗಳು ಕೋವಿಡ್ ಸೋಂಕಿನಿಂದ ಬಳಲುತ್ತಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ. ಕೆಲವು ಸಿಬ್ಬಂದಿಗಳು ಈಗಾಗಲೇ ಕೋವಿಡ್ ನ

ಚಿಕಿತಸೆ ಪಡೆದು ಗುಣಮುಖರಾಗಿ ಮತ್ತೆ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ ಎಂದು ತಿಳಿಸಿದರು. ಈ ನಿಟ್ಟಿನಲ್ಲಿ ವಿಶ್ವವಿದ್ಯಾಲಯವು ಅನೇಕ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಸಿಬ್ಬಂದಿಗಳಿಗೆ ದಿನದಲ್ಲಿ ಎರಡು ಬಾರಿ ಕಷಾಯ ನೀಡಲಾಗುತ್ತಿದೆ, ನಿಯಮಿತವಾಗಿ ಆವರಣವನ್ನು ಸ್ಯಾನಿಟೈಸ್ ಮಾಡುತ್ತಿದ್ದು, ಇದಕ್ಕೆ ಸಂಬಂಧಪಟ್ಟಂತೆ ಕೋವಿಡ್ ಸಮಿತಿ ರಚಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದ್ದು, ಧೈರ್ಯಗೆಡದೆ ಸಿಬ್ಬಂದಿ ವರ್ಗವರು ಹುರುಪಿನಿಂದ ಕೆಲಸ ಮಾಡುತ್ತಿದ್ದಾರೆ ಎಂದರು. ಇದಕ್ಕೆ ಎಲ್ಲ ಸದಸ್ಯರು, ಮೆಚ್ಚುಗೆ ವ್ಯಕ್ತಪಡಿಸಿದರು.

ಮೇಲಿನ ಚರ್ಚೆ ಹಾಗೂ ವಿವರಣೆಗಳೊಂದಿಗೆ ಸದರಿ ವಿಷಯವನ್ನು ಅನುಮೋದಿಸಲು ಶೈಕ್ಷಣಿಕ ಪರಿಷತ್ತು ನಿರ್ಣಯಿಸಿತು.

**ವಿಷಯ ಸಂಖ್ಯೆ 5: ವಿವಿಧ ಸಂಸ್ಥೆ/ಇಲಾಖೆಗಳೊಂದಿಗೆ ತಿಳುವಳಿಕೆ/ ಒಡಂಬಡಿಕೆ (MoU) ಮಾಡಿಕೊಳ್ಳುವ ಕುರಿತಾದ ವಿಷಯವನ್ನು ಪರಿಗಣಿಸುವುದು ಹಾಗೂ ಅನುಮೋದಿಸುವುದು.**

**Subject No. 5: To consider and approve entering into Memorandum of Understanding (MoU) with different organisations /departments.**

**ಪರಾಮರ್ಷನ ಟಿಪ್ಪಣಿ:–**

ವಿಶ್ವವಿದ್ಯಾಲಯದ ವತಿಯಿಂದ ಈಗಾಗಲೇ ಈ ಕೆಳಕಂಡ ಸಂಸ್ಥೆಗಳೊಂದಿಗೆ ಒಡಂಬಡಿಕೆ (MoU) ಮಾಡಿಕೊಳ್ಳಲಾಗಿದ್ದು, ಹಲವು ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

| Sl No | Name of the Organisation | Rermarks |
|---|---|---|
| 1 | National Institute of Rural Development and Panchayat Raj (NIRDPR), Hyderabad. | Rural |
| 2 | Mahatma Gandhi National Council of Rural Educaiton (MGNCRE), Hyderabad | Faculty Development Training Program. |
| 3 | Kerala Institute of Local Administration (KILA), Thrissur, Kerala | Internship for the students |
| 4 | Centre for Educational and Social Studies (CESS), Bengaluru | National Level Webinar on National Education Policy |
| 5 | Centre for Multi-Disciplinary Development Research (CMDR), Dharwad | |

ಮುಂದುವರಿದು, ವಿಶ್ವವಿದ್ಯಾಲಯವು ಮುಂದಿನ ದಿನಗಳಲ್ಲಿ ಈ ಕೆಳಕಂಡ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ವಿವಿಧ ಶೈಕ್ಷಣಿಕ, ಸಂಶೋಧನಾ, ತರಬೇತಿ, ವಿಸ್ತೀರಣಾ ಹಾಗೂ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಯೋಜನೆ ರೂಪಿಸಲಾಗುವುದು.

| Sl No | Name of the Organisation | Rermarks |
|---|---|---|
| 1 | Mahatma Gandhi Institute of Rural Energy and Development (MGIRED), Bengaluru | University proposes to start PG Diploma Course on Renewable Energy in MGIRED campus at Bengaluru. |
| 2 | Grassroots Research And Advocacy Movement (GRAAM), Mysore | University intends to take up activities related to Research, Training, Academic and Extension activities. |
| 3 | Department of Ayurveda, Yoga and Naturopathy, Unani, Siddha and Homeopathy (AYUSH). | University is planning to establish model wellness centres and take up Information, Education and Communication (IEC) programs. |
| 4 | University of Agricultural Sciences (UAS), Dharwad | To promote activities related to agriculture |
| 5 | National Institute of Mental Health and Neuro-Sciences (NIMHANS), Bengaluru | University proposes to establish a Counselling Centre in the University with the collaboration of NIMHANS. |
| 6 | MYRADA, Bengaluru | University intends to take up activities related to Research, Training, Academic and Extension activities. |
| 7 | Council for Scientific and Industrial Research (CSIR) | University intends to take up cultivation and development of Bio Fuel Project. |

28–08–2020ರಂದು ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನಲ್ಲಿ ಸದಸ್ಯರು ಅನುಮೋದಿಸಿದ್ದು, ಶೈಕ್ಷಣಿಕ ಪರಿಷತ್ತಿನ ಅವಗಾಹನೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.(ಅನುಬಂಧ ೧ ರಲ್ಲಿ ಲಗತ್ತಿಸಲಾಗಿದೆ)

:: ನಿರ್ಣಯ::

ಸದರಿ ವಿಷಯದ ಬಗ್ಗೆ ಮಾನ್ಯ ಕುಲಪತಿಗಳು, ವಿವಿಧ ಒಡಂಬಡಿಕೆ (MoU) ಗಳ ಪ್ರಸ್ತುತ ಬೆಳವಣಿಗೆಗಳನ್ನು ವಿವರಿಸಿದರು.

ಡಾ. ಎಸ್.ಎಸ್. ಮೀನಾಕ್ಷಿಸುಂದರಂ, ಇವರು ಮಾತನಾಡುತ್ತ, ಗಾಂಧಿ ಗ್ರಾಮ ಗ್ರಾಮೀಣ ವಿಶ್ವವಿದ್ಯಾಲಯ, ತಮಿಳುನಾಡು ಹಾಗೂ ಇರ್ಮಾ ಸಂಸ್ಥೆ ಇವರ ಜೊತೆ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ ಪರಿಗಣಿಸಬೇಕು ಎಂದು ಸಲಹೆ ನೀಡಿದರು.

ಪ್ರೊ.ಸುರೇಶ ಕೃಷ್ಣರಾವ್ ಇವರು, ನಮ್ಮ ವಿಶ್ವವಿದ್ಯಾಲಯವು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯವರ ಜೊತೆ ಒಡಂಬಡಿಕೆ ಮಾಡಿಕೊಡಲು ಮುಂದಾಗಬೇಕು. ಇದರಿಂದ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಲಾಭ ಪಡೆದುಕೊಳ್ಳಬಹುದು. ಈ ನಿಟ್ಟಿನಲ್ಲಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಯುಕ್ತರ ಜೊತೆಗೂಡಿ ಸೂಕ್ತ ಕ್ರಮ ಜರುಗಿಸಬೇಕಾಗಿ ಸಲಹೆ ನೀಡಿದರು.

ಇದರ ಜೊತೆಗೆ, ಕುಲಪತಿಗಳು, ಇತ್ತೀಚಿಗೆ ಹಲವು ರಾಷ್ಟ್ರೀಯ/ ಅಂತರ್‌ರಾಷ್ಟ್ರೀಯ ಸಂಘ ಸಂಸ್ಥೆಗಳು ವಿಶ್ವವಿದ್ಯಾಲಯದೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಮುಂದೆ ಬರುತ್ತಿವೆ. ಈ ನಿಟ್ಟಿನಲ್ಲಿ ಸಭೆಯ ಸದಸ್ಯರು ಸಲಹೆ ನೀಡಿದ ಮೇರೆಗೆ ಕ್ರಮ ಜರುಗಿಸಲಾಗುವುದು. ಇದಲ್ಲದೇ ಪ್ರತಿಷ್ಠಿತ ಅಂತರ್‌ರಾಷ್ಟ್ರೀಯ ಸಂಸ್ಥೆಯಾದ MoU International Crops Research Institute for Semi-Arid Tropics (ICRISAT), ಹೈದರಾಬಾದ, ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಸಂಬಂಧಪಟ್ಟವರೊಂದಿಗೆ ಚರ್ಚಿಸಲಾಗುತ್ತಿರುವುದಾಗಿ ತಿಳಿಸಿದರು.

ಮೇಲಿನ ಚರ್ಚೆ ಹಾಗೂ ಸಲಹೆಯೊಂದಿಗೆ ಮೇಲಿನ ಎಲ್ಲಾ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ತಿಳಿಸುತ್ತ ಸದರಿ ವಿಷಯವನ್ನು ಅನುಮೋದಿಸಲು ಶೈಕ್ಷಣಿಕ ಪರಿಷತ್ತು ನಿರ್ಣಯಿಸಿತು.

**ವಿಷಯ ಸಂಖ್ಯೆ 6: ಎಂಜಿಎನ್‌ಆರ್‌ಇಜಿ ಯೋಜನೆಯ ಪ್ರಭಾವ ಮೌಲ್ಯಮಾಪನದಲ್ಲಿ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳನ್ನು ತೊಡಗಿಸುವುದು.**

**Subject No. 6: Involving KSRDPR University Students in the Impact assessment of MGNREG Scheme.**

**ಪರಾಮರ್ಷನ ಟಿಪ್ಪಣಿ:-**

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು (ಎಂಜಿಎನ್‌ಆರ್‌ಇಜಿಎಸ್) ಆರ್‌ಡಿಪಿಆರ್ ಇಲಾಖೆ ಕಳೆದ 13 ವರ್ಷಗಳಿಂದ ಜಾರಿಗೆ ತಂದಿದೆ. ಕೃಷಿ ಕಾರ್ಮಿಕರು, ಭೂಹೀನ, ದುರ್ಬಲ ವಿಭಾಗಗಳು, ಮೂಲ ಸೌಕರ್ಯಗಳು, ನೀರಿನ ಸಂರಕ್ಷಣೆ, ಅರಣ್ಯ, ನೀರಾವರಿ ಸೌಲಭ್ಯಗಳು, ಪಶುಸಂಗೋಪನೆ ಇತ್ಯಾದಿಗಳ ಮೇಲೆ ಈ ಯೋಜನೆಯ ಪರಿಣಾಮವನ್ನು ಅರ್ಥಮಾಡಿಕೊಳ್ಳಲು ಮತ್ತು ಯೋಜನೆಯಲ್ಲಿ ಗುಣಾತ್ಮಕ ಬದಲಾವಣೆಗಳನ್ನು ತರಲು, ನಮ್ಮ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಅವಕಾಶವನ್ನು ಒದಗಿಸಲು ಇಲಾಖೆಯು ಯೋಜಿಸುತ್ತಿದೆ. ಅವರ ಇಂಟರ್ನ್‌ಷಿಪ್ ಕಾರ್ಯಕ್ರಮದ ಭಾಗವಾಗಿ ಈ ಯೋಜನೆಯ ಪ್ರಭಾವವನ್ನು ಅಧ್ಯಯನ ಮಾಡಲು ತಿಳಿಸಲಾಗಿರುತ್ತದೆ.(ಸಂಬಂಧಪಟ್ಟ ಪ್ರತಿಗಳನ್ನು ಅನುಬಂಧ ಲಗತ್ತಿಸಲಾಗಿದೆ)

ಆದುದರಿಂದ,ಸದರಿ ವಿಷಯವನ್ನು 28-08-2020ರಂದು ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನಲ್ಲಿ ಸದಸ್ಯರು ಅನುಮೋದಿಸಿದ್ದು, ಶೈಕ್ಷಣಿಕ ಪರಿಷತ್ತಿನ ಅವಗಾಹನೆಗಾಗಿ ಮತ್ತು ಅನುಸಮರ್ಥನೆಗಾಗಿ ಮಂಡಿಸಲಾಗಿದೆ.

:: ನಿರ್ಣಯ::

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ ಮಾನ್ಯ ಕುಲಪತಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಗೆ ವಿಶ್ವವಿದ್ಯಾಲಯದಲ್ಲಿ ಕಳೆದ ಸಾಲಿನಲ್ಲಿ ತೇರ್ಗಡೆಗೊಂಡ 15 ಮತ್ತು ಈ ವರ್ಷ ತೇರ್ಗಡೆಗೊಂಡ 15 ವಿದ್ಯಾರ್ಥಿಗಳನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಪರಿಣಾಮವನ್ನು ಅರಿಯಲು ಪಟ್ಟಿ ಮಾಡಿ ಸಲ್ಲಿಸಲಾಗಿರುತ್ತದೆ. ಇವರಿಗೆ ಸೂಕ್ತ ತರಬೇತಿ ನೀಡಿ, ಅಧ್ಯಯನ ಮಾಡಲು ಸಹಕಾರಿಯಾಗುವಂತೆ, ಇಲಾಖೆಯ ವತಿಯಿಂದ ಪ್ರತಿ ತಿಂಗಳಿಗೆ, ಗೌರವಧನ ರೂ.15,000/- ಮತ್ತು ರೂ.2000/- ರೂ ಪ್ರಯಾಣ ಭತ್ಯೆ ನೀಡಲಾಗುವುದೆಂದು ಎಂದು ಸವಿಸ್ತಾರವಾಗಿ ವಿವರಿಸಿದರು.

ಶ್ರೀಮತಿ ನೀತಿ ಶರ್ಮ, ಇವರು, ಈ ಕಾರ್ಯಕ್ರಮವು ವಿಶ್ವವಿದ್ಯಾಲಯ ಪಠ್ಯಕ್ರಮದ ಭಾಗವೇ ಅಥವಾ ವಿದ್ಯಾರ್ಥಿಗಳು ತೇರ್ಗಡೆಗೊಂಡ ನಂತರದ ಕಾರ್ಯಕ್ರಮವೇ ಎಂದು ಪ್ರಶ್ನಿಸಿದರು.ಇದಕ್ಕೆ ಉತ್ತರವಾಗಿ, ಮಾನ್ಯ ಕುಲಪತಿಗಳು, ವಿದ್ಯಾರ್ಥಿಗಳು ತೇರ್ಗಡೆಗೊಂಡ ನಂತರ ಅವರಿಗೆ ಅನುಕೂಲವಾಗಲೆಂದು ಈ ಕಾರ್ಯಕ್ರದಲ್ಲಿ ಭಾಗವಹಿಸುತ್ತಿದ್ದಾರೆ ಹಾಗೂ ಈ ಕಾರ್ಯವು ವಿದ್ಯಾರ್ಥಿಗಳಿಗೆ ಕಡ್ಡಾಯವಲ್ಲ ಎಂದು ಹೇಳಿದರು.

ಡಾ. ಎಸ್.ಎಸ್. ಮೀನಾಕ್ಷಿಸುಂದರಂ, ಇವರು ಈ ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳ ಆಯ್ಕೆ ಮಾಡುವ ವಿಧಾನವನ್ನು ತಿಳಿಸಿ ಹೇಳಲು ಹೇಳಿದರು. ಮಾನ್ಯ ಅಧ್ಯಕ್ಷರು ಇದಕ್ಕೆ ಉತ್ತರಿಸುತ್ತ ವಿಶ್ವವಿದ್ಯಾಲಯವೇ ಈ ವಿದ್ಯಾರ್ಥಿಗಳು ಪಡೆದ ಅಂಕಗಳ ಆಧಾರದ ಮೇಲೆ ಹೆಸರುಗಳನ್ನು ಇಲಾಖೆಗೆ ಸೂಚಿಸಲಾಗುವುದು. ವಿದ್ಯಾರ್ಥಿಗಳಿಗೆ ಈ ವಿಷಯವಾಗಿ ಇಲಾಖೆಯ ವತಿಯಿಂದ ತರಬೇತಿ ನೀಡಲು ಕ್ರಮ ಜರುಗಿಸಲಾಗುತ್ತಿದೆ ಎಂದು ವಿವರಿಸಿದರು.

ಈ ಎಲ್ಲಾ ಚರ್ಚೆ ಹಾಗೂ ವಿವರಣೆಯ ನಂತರ ಸದರಿ ವಿಷಯವನ್ನು ಅನುಮೋದಿಸಲು ಶೈಕ್ಷಣಿಕ ಪರಿಷತ್ತು ನಿರ್ಣಯಿಸಿತು.

**ವಿಷಯ ಸಂಖ್ಯೆ 7 :"Regulations Governing Cadre, Recruitment and Promotions of Non-Teaching, Technical and Ministerial Staff in the KSRDPR University, 2019"** ಕರಡು ಪ್ರತಿಯನ್ನು ಅನುಮೋದಿಸುವ ಬಗ್ಗೆ.

**Subject No. 7: To consider the draft "Regulations Governing Cadre, Recruitment and Promotions of Non-Teaching, Technical and Ministerial Staff in the KSRDPR University, 2019".**

**ಪರಾಮರ್ಷನ ಟಿಪ್ಪಣಿ:-**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಅಧಿನಿಯಮ, 2016ರ ಪ್ರಕರಣ 56ರನ್ವಯ "Regulations Governing Cadre, Recruitment and Promotions of Non-Teaching, Technical and Ministerial Staff in the KSRDPR University, 2019"ರಚಿಸಿ ದಿನಾಂಕ 19-07-2020ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್),

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಗೆ ಸಲ್ಲಿಸಲಾಗಿತ್ತು. ಈ ವಿಷಯಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆವಿನಿಯಮಗಳನ್ನು ಪರಿಶೀಲಿಸಿ ಪತ್ರ ಸಂಖ್ಯೆ. ಗ್ರಾಅಪ 128 ಜಿಪಸ 2019(ಭಾಗ-16),ದಿನಾಂಕ 03-10-2019ರಂದು Clause 14 "Appointment on Contract" ಅನ್ನು ತೆಗೆದುಹಾಕಿ, ಪರಿಷ್ಕರಿಸಿ ಮರು ಸಲ್ಲಿಸುವಂತೆ ನಿರ್ದೇಶಿಸಿ ಪತ್ರ ಬರೆದಿರುತ್ತಾರೆ.

ಸದರಿ Clauseನ ವಿವರ ಈ ಕೆಳಕಂಡಂತಿದೆ.

**Clause 14 "Appointment on Contract"**

(1) Notwithstanding anything to the contrary contained in these Regulations, the Executive Council/Vice-Chancellor may, as provided in Rule 15 of Karnataka Civil Services (General Recruitment) Rules, 1977, make appointment on contract against the sanctioned strength as per C & R Regulations to a post in the University, of a person who in the opinion of the Executive Council/Vice-Chancellor, in respect of posts belonging to Group-A and Group-B, and the Vice-Chancellor in the case of Group-C and Group-D posts, as per Section 68 of the Act, is able to discharge the duties of such post on such terms and conditions as may be determined by agreement.

(2) The appointment on contract may be for a period of three years at a time. However, on satisfactory performance, such persons may be reappointed on such terms and conditions as prescribed from time to time till such persons attain the age of superannuation, with the approval of the Executive Council/Vice-Chancellor as the case may be. The persons appointed on contract basis shall be entitled for Basic Pay, D.A, H.R.A, and leaves applicable for the respective post and not eligible for promotion, annual increment, pension, CCA but are eligible for Provident Fund as per prevailing rules.

(3) The person appointed on contract shall give an undertaking to the effect that he/she shall not claim for regularization/regular appointment on the basis of contract appointment.

ಸದರಿ ವಿನಿಯಮವನ್ನು ಪರಿಷ್ಕರಿಸಿ ಅದರ ಕರಡು ಪ್ರತಿಯನ್ನು ಶೈಕ್ಷಣಿಕ ಪರಿಷತ್ತಿನ ಪರಿಗಣನೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

:: ನಿರ್ಣಯ::

ಮಾನ್ಯ ಅಧ್ಯಕ್ಷರು ಸಭೆಗೆ **Clause 14 "Appointment on Contract"** ವಿಷಯದ ಬಗ್ಗೆ ಸವಿಸ್ತಾರವಾಗಿ ವಿವರಿಸಿದರು.

ಈಗಾಗಲೇ, ಸದರಿ **Clause 14** ನಲ್ಲಿರುವ ವಿಷಯವನ್ನು, ವಿನಿಯಮದ ಇನ್ನೊಂದು ಭಾಗದಲ್ಲಿ ಅಳವಡಿಸಿರುವುದರಿಂದ, **Clause 14** ನಲ್ಲಿರುವ ಕೈಬಿಟ್ಟು, ಘನತೆವೆತ್ತ ರಾಜ್ಯಪಾಲರ ಕಛೇರಿಗೆ ಮರು ಸಲ್ಲಿಸಬಹುದಾಗಿದೆ ಎಂದು ವಿವರಿಸಲಾಯಿತು. ಅದಕ್ಕೆ, ಡಾ.ಎಸ್.ಎಸ್. ಮೀನಾಕ್ಷಿಸುಂದರಂ, ಇವರು ಇತರೆ ಸದಸ್ಯರು ಸಹಮತಿ ವ್ಯಕ್ತಪಡಿಸಿದರು.

ಸರ್ಕಾರದಿಂದ ಅನುಮೋದನೆಗಾಗಿ ಬಾಕಿ ಇರುವ ವಿಶ್ವವಿದ್ಯಾಲಯದ **Classification, Control and Appeal (CCA) Rules,** ವಿನಿಯಮಗಳ ಕುರಿತು ಹಾಗೂ ಇನ್ನಾವುದಾದರೂ ಬಾಕಿ ಇರುವ ವಿನಿಯಮಗಳ ಬಗ್ಗೆ ಡಾ.ಎಸ್.ಎಸ್. ಮೀನಾಕ್ಷಿಸುಂದರಂ, ಇವರು ವಿವರಣೆ ಕೇಳಿದರು. ಇದಕ್ಕೆ ಉತ್ತರವಾಗಿ ಕುಲಪತಿಗಳು ಪ್ರಸ್ತುತ CCA rules ವಿಷಯದ ವಿನಿಯಮಗಳು ಇಲಾಖೆಯ ಅನುಮೋದನೆಗೆ ಬಾಕಿ ಇರುವುದಾಗಿ ತಿಳಿಸಿದರು. ಇದರ ಕುರಿತು ಸೂಕ್ತ ಜರುಗಿಸಲು, ಇಲಾಖೆಗೆ ಕೋರಬಹುದಾಗಿದೆ ಎಂದು ಸಭೆಯು ಸಲಹೆ ನೀಡಿತು.

ಅದರಂತೆ, ಮೇಲಿನ ವಿಷಯವನ್ನು ಪರಿಗಣಿಸಿ ಸದರಿ ವಿನಿಯಮವನ್ನು ಪರಿಷ್ಕರಿಸಿ ಘನತೆವೆತ್ತ ರಾಜ್ಯಪಾಲರ ಕಛೇರಿಗೆ ಮರು ಸಲ್ಲಿಸುವುದಕ್ಕೆ, ಅನುಮೋದಿಸಲು ಶೈಕ್ಷಣಿಕ ಪರಿಷತ್ತು ನಿರ್ಣಯಿಸಿತು.

**ವಿಷಯ ಸಂಖ್ಯೆ 8 :ವಿಶ್ವವಿದ್ಯಾಲಯದಲ್ಲಿ ಜರುಗಿಸಲಾಗುತ್ತಿರುವ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳ ಪಠ್ಯಕ್ರಮವನ್ನು ಪರಿಷ್ಕರಣೆಗೊಳಿಸುವ ಕುರಿತಾದ ವಿಷಯವನ್ನು ಪರಿಗಣಿಸಿ ಅನುಮೋದಿಸುವ ಬಗ್ಗೆ.**

## Subject No. 8: To consider and approve the revision of Syllabus of various educational programmes being offered in the University.

**ಪರಾಮರ್ಷನ ಟಿಪ್ಪಣಿ:-**

ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ 10 ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ವಿಶ್ವವಿದ್ಯಾಲಯಕ್ಕೆ ಭೇಟಿ ನೀಡುವ ಹಲವು ಗೌರವ ಪ್ರಾಧ್ಯಾಪಕರು, ಪರಿಣಿತರು, ಸಂಪನ್ಮೂಲ ವ್ಯಕ್ತಿಗಳು ಹಾಗೂ ವಿಷಯ ತಜ್ಞರೊಂದಿಗೆ ಸಮಾಲೋಚನೆ ಮಾಡಿದಾಗ, ವಿದ್ಯಾರ್ಥಿಗಳಿಗೆ ಇಂದಿನ ಸ್ಪರ್ಧಾತ್ಮಕ ಜಗತ್ತಿಗೆ ಅಣಿಗೊಳಿಸಲು, ಕಲಿಕಾ ವಿಷಯಗಳನ್ನು ಇನ್ನೂ ಹೆಚ್ಚುಪರಿಣಾಮಕಾರಿಯಾಗಿಸಲು ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳ ಪಠ್ಯಕ್ರಮವನ್ನು ಪರಿಷ್ಕರಣೆಗೊಳಿಸುವ ಅಗತ್ಯತೆವಿರುವುದಾಗಿ ತಿಳಿಸಿರುತ್ತಾರೆ. ಈ ನಿಟ್ಟಿನಲ್ಲಿ, ಇದಕ್ಕೆ ಸಂಬಂಧಿಸಿದಂತೆ, ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳ ಅಧ್ಯಯನ ಮಂಡಳಿಗಳಲ್ಲಿ ಅನುಮೋದಿಸಿದಂತೆ, ಪರಿಷ್ಕೃತ ಪಠ್ಯಕ್ರಮಗಳ ಕರಡು ಪ್ರತಿಗಳನ್ನು ಶೈಕ್ಷಣಿಕ ಪರಿಷತ್ತಿನ ಪರಿಗಣನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

**:: ನಿರ್ಣಯ::**

ಮಾನ್ಯ ಕುಲಪತಿಗಳು ವಿಶ್ವವಿದ್ಯಾಲಯದ ವಿವಿಧ ಶೈಕ್ಷಣಿಕ ಕಾರ್ಯಕ್ರಮದ ಪಠ್ಯಕ್ರಮ ಪರಿಷ್ಕರಣೆಗೊಳಿಸಲು ತಮ್ಮ ಸಲಹೆ, ಸಹಕಾರವನ್ನು ನೀಡಿದ ಎಲ್ಲಾ BOS ಸದಸ್ಯರ ಕೊಡುಗೆಗೆ ಅಭಿನಂದಿಸಿದರು ಹಾಗೂ ಸದರಿ ವಿಷಯದ ಬಗ್ಗೆ ವಿವರಿಸಿದರು.

ಪ್ರೊ. ಎಸ್. ಸಿವಣ್ಣ, ಇವರು ಪಠ್ಯಕ್ರಮ ಬಲಾವಣೆಯ ಅಗತ್ಯತೆಯ ಬಗ್ಗೆ ವಿವರಿಸಿದರು.ಕೆಲವು ಪಠ್ಯಕ್ರಮವು ಹಳೆಯದಾಗಿದ್ದು, ಅದನ್ನು ಪರಿಷ್ಕರಿಸಿ ಹೊಸ ವಿಷಯಗಳನ್ನು ಅಳವಡಿಸುವ ಅಗತ್ಯವಿದೆ, ಇದರಿಂದ ವಿದ್ಯಾರ್ಥಿಗಳಿಗೆ

ಅನುಕೂಲವಾಗುವುದು ಎಂದು ಹೇಳಿದರು. ಇದರ ಜೊತೆಗೆ, ಬೋಧಕ ಸಿಬ್ಬಂದಿಯವರಿಗೆ, ನೂತನ ಪಠ್ಯಕ್ರಮದನುಸಾರ ಅಣಿಗೊಳಿಸಿಕೊಳ್ಳಲು ಒರಿಯೆಂಟೇಷನ್ ಮಾಡಬೇಕೆಂದು ವಿವರಿಸಿದರು.

ಪ್ರೊ. ಜೀವನ್ ಕುಮಾರ್, ಇವರು ಎಮ್.ಎ (ಆರ್.ಡಿ.ಪಿ.ಆರ್) ಹಾಗೂ ಎಮ್.ಎ (ಸಾರ್ವಜನಿಕ ಆಡಳಿತ) ಕಾರ್ಯಕ್ರಮದ ಪಠ್ಯಕ್ರಮವನ್ನು ಸಮರ್ಪಕವಾಗಿ ನವೀಕರಿಸಲಾಗಿದೆ.

- ✓ ಎಲ್ಲಾ ಪ್ರೋಗ್ರಾಮ್ ಸಂಯೋಜಕರ ಜವಾಬ್ದಾರಿ ಹಾಗೂ ಅವರ ಕೈಗಳನ್ನು ಬಲಪಡಿಸುವ ಅಗತ್ಯವಿದೆ.
- ✓ ಈಗಿರುವ ಶಿಕ್ಷಕರನ್ನು ತಾವು ಪಾಠ ಮಾಡುವ ವಿಷಯದ ಬಗ್ಗೆ ಮತ್ತಷ್ಟು ಪೂರ್ವಾಭಿಮುಖಿಗೊಳಿಸುವ ಅಗತ್ಯವಿದೆ.
- ✓ ವಿದ್ಯಾರ್ಥಿಗಳನ್ನು ಬೋಧಕರ ಬೋಧನೆಯ ಬಗ್ಗೆ ಪ್ರತಿಕ್ರಿಯೆ ಪಡೆದುಕೊಳ್ಳುವುದು.

ಹೊಸ ಶಿಕ್ಷಣ ನೀತಿ 2020ರ ಅನುಸಾರ ವಿಶ್ವವಿದ್ಯಾಲಯದ ಪ್ರೊಗ್ರಾಮುಗಳನ್ನು ರೂಪಿಸಬೇಕು ಹಾಗೂ ಅದರಂತೆ ವಿಶ್ವವಿದ್ಯಾಲಯದಲ್ಲಿ ನೂತನವಾಗಿ ಪದವಿಪೂರ್ವ ಕೋರ್ಸ್‌ಗಳನ್ನು ಪ್ರಾರಂಭಿಸಬೇಕು ಎಂದು ಡಾ. ನಾಗೇಶ್ವರ್ ರಾವ್, ಹೇಳಿದರು.

ಪ್ರೊ ಗೋಪಾಲ ನಾಯಕ್, ಇವರು ಮಾತನಾಡುತ್ತ ಪ್ರತಿ ಕೋರ್ಸ್‌ನ ನಂತರ ವಿದ್ಯಾರ್ಥಿಗಳ ಪ್ರತಿಕ್ರಿಯೆ ಪಡೆದುಕೊಳ್ಳುವುದರಿಂದ, ಬೋಧನೆ ಗುಣಮಟ್ಟವನ್ನು ಹೆಚ್ಚಿಸಬಹುದು ಹಾಗೂ ವಿಶ್ವವಿದ್ಯಾಲಯಕ್ಕೆ ನೇಮಕಾತಿ ಮಾಡಲು ಬರುವ ಸಂಸ್ಥೆಗಳಿಂದ ಪ್ರತಿಕ್ರಿಯೆ ಪಡೆದರೆ, ವಿದ್ಯಾರ್ಥಿಗಳಿಗೆ ಹೆಚ್ಚು ಹೆಚ್ಚು ಉದ್ಯೋಗಾವಕಾಶಗಳನ್ನು ಮಾಡಿಕೊಡಬಹುದು ಎಂದು ಸಲಹೆ ನೀಡಿದರು.

ಪ್ರೊ. ಸುರೇಶ ಕೃಷ್ಣರಾವ್, ಇವರು ಮಾತನಾಡುತ್ತ, ಎಮ್.ಪಿ.ಎಚ್. ಕಾರ್ಯಕ್ರಮದ ಪಠ್ಯಕ್ರಮವನ್ನು ಎರಡು ವರ್ಷದ ಹಿಂದೆಯೇ ವಿನ್ಯಾಸಗೊಳಿಸಿರುವುದರಿಂದ, ಪ್ರಸ್ತುತ, ಅದನ್ನು ಪರಿಷ್ಕರಿಸುವ ಅಗತ್ಯತೆ ಇರುವುದಿಲ್ಲವಾಗಿ ತಿಳಿಸಿದರು.

ಇದಕ್ಕೆಲ್ಲಾ ಉತ್ತರವಾಗಿ ಮಾನ್ಯ ಕುಲಪತಿಗಳು,

- ✓ ಸಾಮಾನ್ಯವಾಗಿ ವಿಶ್ವವಿದ್ಯಾಲಯವು BOS ಹಾಗೂ ಶೈಕ್ಷಣಿಕ ಪರಿಷತ್ತಿನ ಸಲಹೆಗಳನ್ನು ಅನುಸರಿಸಿ ಶೈಕ್ಷಣಿಕ ಚಟುವಟಿಕೆ ಹಾಗೂ ಬದಲಾವಣೆಗಳನ್ನು ಮಾಡುವುದು.
- ✓ ಭೋದಕ ಸಿಬ್ಬಂದಿಯವರಿಗೆ ಶೈಕ್ಷಣಿಕ ವರ್ಷ ಪ್ರಾರಂಭದ ಮುನ್ನ ಒರಿಯೆಂಟೇಷನ್ ಪ್ರೊಗ್ರಾಂ ಮಾಡಲಾಗುವುದು.
- ✓ ವಿದ್ಯಾರ್ಥಿಗಳ ಪ್ರತಿಕ್ರಿಯೆಯನ್ನು ನಿಯತವಾಗಿ ಪಡೆದುಕೊಂಡು ಅದರ ಮಾಲ್ಯಮಾಪನವನ್ನು ಕೈಗೊಂಡು ಅದರ ವರದಿಯನ್ನು IQAC ಮೂಲಕ ನೀಡಲಾಗುವುದು ಎಂದು ವಿವರಿಸಿದರು.

ಈ ಎಲ್ಲಾ ಚರ್ಚೆ ಹಾಗೂ ವಿವರಣೆಗಳ ನಂತರ ಎಮ್.ಕಾಮ್, ಎಮ್.ಬಿ.ಎ., ಎಮ್.ಎ (ಆರ್.ಡಿ.ಪಿ.ಆರ್), ಎಮ್.ಎ (ಸಾರ್ವಜನಿಕ ಆಡಳಿತ), ಎಮ್.ಎ ಅರ್ಥಶಾಸ್ತ್ರ (ಅಭಿವೃದ್ಧಿ ಅರ್ಥಶಾಸ್ತ್ರ), ಎಮ್.ಎಸ್ಸಿ (ಆಹರ ವಿಜ್ಞಾನ ಮತ್ತು ತಂತ್ರಜ್ಞಾನ) ವಿಷಯಗಳ ಪಠ್ಯಕ್ರಮವನ್ನು ಪರಿಷ್ಕರಣೆಗೊಳಿಸಿದ ರೀತಿಯಲ್ಲಿ ಅನುಮೋದಿಸಲು ಶೈಕ್ಷಣಿಕ ಪರಿಷತ್ತು ನಿರ್ಣಯಿಸಿತು.

ವಿಷಯ ಸಂಖ್ಯೆ 9 :ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಳ್ಳಲಾಗುತ್ತಿರುವ ವಿವಿಧ ತರಬೇತಿ ಕಾರ್ಯಕ್ರಮಗಳ ಯೋಜನೆಯನ್ನು ಪರಿಗಣಿಸಿ ಅನುಮೋದಿಸುವ ಬಗ್ಗೆ.

**Subject No. 9: To consider and approve the plan of various training programmes scheduledby the University.**

**ಪರಾಮರ್ಷನ ಟಿಪ್ಪಣಿ:-**

ವಿಶ್ವವಿದ್ಯಾಲಯದ ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರನಾ ಕೇಂದ್ರದಿಂದ ಹಲವು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.ಈ ನಿಟ್ಟಿನಲ್ಲಿ, ಇದಕ್ಕೆ ಸಂಬಂಧಪಟ್ಟ ಸ್ಥಾಯಿ ಸಮಿತಿಯಲ್ಲಿ ಚರ್ಚಿಸಿಅನುಮೋದಿಸಲಾಗಿರುತ್ತದೆ.ಸದರಿ ವಿಷಯವನ್ನು 28-08-2020ರಂದು ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನಲ್ಲಿ ಸದಸ್ಯರು ಅನುಮೋದಿಸಿದ್ದು, ಶೈಕ್ಷಣಿಕ ಪರಿಷತ್ತಿನ ಅವಗಾಹನೆಗಾಗಿ ಮತ್ತು ಅನುಸಮರ್ಥನೆಗಾಗಿ ಮಂಡಿಸಲಾಗಿದೆ. (ತರಬೇತಿ ಕಾರ್ಯಕ್ರಮಗಳ ಯೋಜನಾ ಪಟ್ಟಿ ಅನುಬಂಧ-1 ರಲ್ಲಿ ಲಗತ್ತಿಸಿದೆ)

**:: ನಿರ್ಣಯ::**

ಸದರಿ ವಿಷಯದ ಬಗ್ಗೆ ವಿವರಿಸುತ್ತ, ಕುಲಪತಿಗಳು 04-08-2020 ರಂದು ಪ್ರೊ. ಬಿ. ತಿಮ್ಮೇಗೌಡ, ಮಾಜಿ ಕುಲಪತಿಗಳು, ಕ.ರಾ.ಗ್ರಾ.ಅ.ಪಂ.ರಾಜ್ ವಿಶ್ವವಿದ್ಯಾಲಯ, ಇವರ ಅಧ್ಯಕ್ಷತೆಯಲ್ಲಿ ಜರುಗಿದ ಸ್ಥಾಯಿ ಸಮಿತಿ ಸಭೆಯಲ್ಲಿ ವರ್ಷವಿಡೀ ವಿವಿಧ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಲಹೆ ನೀಡಿರುತ್ತಾರೆ. ಅದರಾನುಸಾರ ವಿಶ್ವವಿದ್ಯಾಲಯದಲ್ಲಿ ಈ ಕೆಳಕಂಡ 3 ಮುಖ್ಯ ತರಬೇತಿ ಕಾರ್ಯಕ್ರಮಗಳನ್ನು 2020-21 ಸಾಲಿನಲ್ಲಿ ನಡೆಸಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

a) Disaster Management at Gram Panchayat level.
b) Resource Mobilization at Gram Panchayat for self-reliance.
c) Role and responsibilities of Gram Panchayat in Aspirational Districts.

ಡಾ. ನಾಗೇಶ್ವರ್ ರಾವ್, ಮಾತನಾಡುತ್ತ ಜಿಲ್ಲಾ ಪಂಚಾಯತ್‌ನ ಪಿ.ಡಿ.ಓ, ಸಿ.ಇ.ಓ ಅವರಿಗೆ ಅಭಿವೃದ್ಧಿ ಕಾರ್ಯಕ್ರಮ ಹಾಗೂ ಡಿ.ಪಿ.ಆರ್ (Detailed Project report) ತಯಾರಿಸುವಲ್ಲಿ ಅನುಕೂಲವಾಗುವ ಹಾಗೆ ಜಿಯೋಇನ್ಫೋರ್ಮೇಟಿಕ್ಸ್ ಬಗ್ಗೆ ತರಬೇತಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಸಲಹೆ ನೀಡಿದರು. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ(ISRO), EPRIS(Empowerment of Panchayat Raj Institutions Spatially)ಯೋಜನೆಯಲ್ಲಿ ಮಳೆ ನೀರು ಸಂರಕ್ಷಣೆಗೆ ಸೂಕ್ತ ಸ್ಥಳ ಕಂಡುಹಿಡಿಯುವಲ್ಲಿ, ಚೆಕ್ ಡ್ಯಾಮ್‌ಗಳ ನಿರ್ಮಾಣದಲ್ಲಿ ಹಾಗೂ ಮುಂತಾದವುಗಳಲ್ಲಿ ಜಿಯೋಇನ್ಫೋರ್ಮೇಟಿಕ್ಸ್ ಬಳಸುತ್ತಾರೆ. ನಮ್ಮ ವಿಶ್ವವಿದ್ಯಾಲಯವು ಕೂಡ EPRIS ನಂತಹ ಯೋಜನೆಗಳಲ್ಲಿ ಜಿಯೋಇನ್ಫೋರ್ಮೇಟಿಕ್ಸ್ ತರಬೇತಿ ಕಾರ್ಯಕ್ರಮದಲ್ಲಿ ಇದನ್ನು ಅಳವಡಿಸಬೇಕು ಎಂದು ಹೇಳಿದರು.

ಡಾ. ಸುರೇಶ್ ಕೃಷ್ಣರಾವ್, ಇವರು ಮಾತನಾಡುತ್ತ, ಪ್ರಥಮ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಈ ಸಾಂಕ್ರಾಮಿಕ ಪಿಡುಗಿನ ಸಮಯದಲ್ಲಿ ಸಾಮಾಜಿಕ ಅಂತರ ಕಾಪಾಡುವುದು, ಮುಖಕ್ಕೆ ಮಾಸ್ಕ ಬಳಸುವುದು ಹಾಗೂ ಕೈತೊಳೆಯುವ ಪ್ರಾಮುಖ್ಯತೆ, ಕೋವಿಡ್–19 ನಿಂದ ತಮ್ಮನ್ನು ತಾವು ಹೇಗೆ ರಕ್ಷಿಸಿಕೊಳ್ಳಬಹುದು ಎಂಬುದರ ಬಗ್ಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದು ಸಲಹೆ ನೀಡಿದರು. ಇದಕ್ಕೆ ಉತ್ತರಿಸುತ್ತ ಕುಲಪತಿಗಳು, ಇದನ್ನು ಸ್ಟೂಡೆಂಟ್ ಇಂಡಕ್ಷನ್ ಪ್ರೊಗ್ರಾಮಿನ ಒಂದು ಪ್ರಮುಖ ಭಾಗವಾಗಿ ಸೇರಿಸಬಹುದು ಎಂದು ಹೇಳಿದರು.

ಪ್ರೊ.ಜೀವನ್ ಕುಮಾರ್, ಇವರು, ವಿಶ್ವವಿದ್ಯಾಲಯ 2020–21 ವರ್ಷದಲ್ಲಿ ಕೈಗೊಂಡಿರುವ 3 ತರಬೇತಿ ಕಾರ್ಯಕ್ರಮಗಳನ್ನು ಶ್ಲಾಘಿಸಿದರು. ಭಾರತ ಸರ್ಕಾರವು ಸುಸ್ಥಿರ ಅಭಿವೃದ್ಧಿ ಗುರಿಗಳನ್ನು (Sustainable Development Goals SDG) ಮತ್ತು ಸಂಬಂಧಿತ ಗುರಿಗಳನ್ನು ಸಾಧಿಸಲು ಬದ್ಧವಾಗಿದೆ. ಈ ಗುರಿಗಳನ್ನು ಮುಟ್ಟುವಲ್ಲಿ ಪಿ.ಡಿ.ಓ ಗಳ ಪಾತ್ರ ಮುಖ್ಯವಾದದ್ದು. ಅನೇಕ ಪಿ.ಡಿ.ಓ ಗಳಿಗೆ/ ಚುನಾಯಿತ ಜನಪ್ರತಿನಿಧಿಗಳಿಗೆ SDG ಗುರಿ ತಲುಪುವಲ್ಲಿ ಅವರ ಪಾತ್ರದ ಅರಿವಿಲ್ಲ. ಈ ನಿಟ್ಟಿನಲ್ಲಿ ನಮ್ಮ ವಿಶ್ವವಿದ್ಯಾಲಯ ಸಂಬಂಧಪಟ್ಟವರಿಗೆ ಸೂಕ್ತ ತರಬೇತಿ ನೀಡುವ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು. ಅದಕ್ಕೆ ಕುಲಪತಿಗಳು, ಸದರಿ ಕಾರ್ಯವನ್ನು ವಿಶ್ವವಿದ್ಯಾಲಯದ ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರದ ಮುಖಾಂತರ ಕೈಗೊಳ್ಳಲು ಸಂಬಂಧಪಟ್ಟವರಿಗೆ ಮಾರ್ಗದರ್ಶನ ನೀಡಲಾಗುವುದೆಂದು ವಿವರಿಸಿದರು.

ಈ ಎಲ್ಲಾ ಚರ್ಚೆ ಹಾಗೂ ವಿವರಣೆಗಳನ್ನು ಪರಿಗಣಿಸಿದ ನಂತರ ಸದರಿ ವಿಷಯವನ್ನು ಅನುಮೋದಿಸಲು ಶೈಕ್ಷಣಿಕ ಪರಿಷತ್ತು ನಿರ್ಣಯಿಸಿತು.

**ವಿಷಯ ಸಂಖ್ಯೆ 10 :ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗಾಗಿ ಹಮ್ಮಿಕೊಳ್ಳಲಾಗುತ್ತಿರುವ ವಿವಿಧ ಕಾರ್ಯಕ್ರಮಗಳ ಯೋಜನೆಯನ್ನು ಪರಿಗಣಿಸಿ ಅನುಮೋದಿಸುವ ಬಗ್ಗೆ.**

**Subject No. 10: To consider and approve the various programmes scheduled by the University for the overall development of students.**

**ಪರಾಮರ್ಷನ ಟಿಪ್ಪಣಿ:–**

ವಿಶ್ವವಿದ್ಯಾಲಯದಲ್ಲಿ, ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗಾಗಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.ಇದಕ್ಕಾಗಿ “ಯೋಗಕ್ಷೇಮ” ಯೋಗಕೇಂದ್ರ, “ನೈಪುಣ್ಯ” ಉದ್ಯೋಗ ಕೋಶ, “ಆತ್ಮವಿಶ್ವಾಸ” ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೋಶ, ಆಂತರಿಕ ಗುಣಮಟ್ಟ ಭರವಸೆ ಕೋಶ, ಸಾಮಾಜಿಕ ಮಾಧ್ಯಮ ಕೋಶ, ಪ್ರತಿ ಮಾಹೆಯ ಎರಡನೇಯ ಶನಿವಾರದಂದು ವಿಸ್ತೀರಣಾ ಚಟುವಟಿಕೆಗಳಲ್ಲಿ ಭಾಗವಹಿಸಲು “ಸ್ವ–ದೇಸಿ” ದಿನದ ಆಚರಣೆ ಇತ್ಯಾದಿಗಳನ್ನುನಡೆಸಲಾಗುತ್ತಿದ್ದು, ಸದರಿ ವಿಷಯವನ್ನು ಶೈಕ್ಷಣಿಕ ಪರಿಷತ್ತಿನ ಅವಗಾಹನೆಗಾಗಿ ಮಂಡಿಸಲಾಗಿದೆ.

**:: ನಿರ್ಣಯ::**

ಸದರಿ ವಿಷಯದ ಬಗ್ಗೆ ಅಧ್ಯಕ್ಷರು ವಿವರಿಸಿದರು ಹಾಗೂ ಶೈಕ್ಷಣಿಕ ಪರಿಷತ್ತಿನ ಸದಸ್ಯರು ಮೇಲಿನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಕ್ಕೆ ಅಭಿನಂದಿಸಿ, ಸದರಿ ವಿಷಯವನ್ನು ಅನುಮೋದಿಸಿದರು.

ವಿಷಯ ಸಂಖ್ಯೆ11: ಅಧ್ಯಕ್ಷರ ಅನುಮತಿಯೊಂದಿಗೆ ಬೇರೆ ಯಾವುದೇ ವಿಷಯ.

**Subject No. 11: Any other matters with the permission of Chairperson.**

ಮಾನ್ಯ ಕುಲಪತಿಗಳು ಸಭೆಯ ಸದಸ್ಯರಿಗೆ ಯಾವುದಾದರೂ ಸಲಹೆ, ಸೂಚನೆಗಳಿದ್ದರೆ ತಿಳಿಸಬೇಕು ಎಂದು ಕೇಳಿದರು.

ಡಾ. ಎಸ್.ಎಸ್. ಮೀನಾಕ್ಷಿಸುಂದರಂ, ಇವರು ಮಾತನಾಡುತ್ತ ಕೆಲವು ಸಲಹೆಗಳನ್ನು ಈ ಕೆಳಕಂಡಂತೆ ನೀಡಿದರು:

- ✓ ಮುಂದಿನ ಸಭೆಗಳಲ್ಲಿ ಹಿಂದಿನ ಶೈಕ್ಷಣಿಕ ಸಭೆಯ ನಿರ್ಣಯಾನುಸಾರ ತೆಗೆದುಕೊಂಡ ಕ್ರಮಗಳ ಅನುಸರಣಾ ವರದಿಯನ್ನು ಸಭೆಯ ಮುಂದೆ ಸಲ್ಲಿಸಬೇಕು.
- ✓ ಶೈಕ್ಷಣಿಕ ಪರಿಷತ್ತಿನ ಮುಂದಿನ ಸಭೆಗಳಲ್ಲಿ ವಿಶ್ವವಿದ್ಯಾಲಯದ ಶೈಕ್ಷಣಿಕ ವಿಷಯಗಳ ಜೂತೆ ವಿಶ್ವವಿದ್ಯಾಲಯ ಮುಖ್ಯ ಧ್ಯೇಯೋದ್ದೇಶಗಳಾದ
  - ➢ ವಿದ್ಯಾರ್ಥಿಗಳ ಪರಿಣಾಮಕಾರಿಯಾಗಿ ಶಿಕ್ಷಣ ನೀಡುವುದು.
  - ➢ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿನ ಚುನಾಯಿತ ಜನಪ್ರತಿನಿಧಿಗಳಿಗೆ ನೀಡಬಹುದು ತರಬೇತಿ.
  - ➢ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳಿಗೆ ತಮ್ಮ ಕಾರ್ಯವನ್ನು ಇನ್ನೂ ಹೆಚ್ಚು ಉತ್ತಮವಾಗಿ ಕಾರ್ಯಬಿರ್ವಹಿಸಲು ನಮ್ಮ ವಿಶ್ವವಿದ್ಯಾಲಯದ ವತಿಯಿಂದ ತೆಗೆದುಕೊಳ್ಳಬಹುದಾದ ಕ್ರಮಗಳ ಕುರಿತು ಮುನ್ನೋಟವನ್ನು ರೂಪಿಸಲು ವಿಶ್ವವಿದ್ಯಾಲಯ ಕೆಲಸ ಮಾಡಬೇಕು ಎಂದು ತಿಳಿಸಿದರು.
- ✓ ಈ ಕೋವಿಡ್ ಪಿಡುಗಿನ ಸಂದರ್ಭದಲ್ಲಿ ವಿಶ್ವವಿದ್ಯಾಲಯ ಯಾವುದೇ ಮುಖ್ಯ ತೀರ್ಮಾನಗಳು ಹಾಗೂ ಬದಲಾವಣೆಯ ಬಗ್ಗೆ ಯೋಚಿಸಲು ಸಾಧ್ಯವಾಗದ ಕಾರಣ, ಭವಿಷ್ಯದಲ್ಲಿ ಅಂದರೆ 2021–22ನೇ ಸಾಲಿನಲ್ಲಿ ಏನು ಮಾಡಬಹುದು ಎಂಬುದರ ಬಗ್ಗೆ ಯೋಚಿಸಿ, ಚರ್ಚಿಸಿ ಅದಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಬೇಕು ಎಂದು ಸಲಹೆ ನೀಡಿದರು.

ಶ್ರೀಮತಿ ನೀತಿ ಶರ್ಮ, ಇವರು, ನೂತನ ಶಿಕ್ಷಣ ನೀತಿಯಲ್ಲಿ ವಿವರಿಸಿದಂತೆ, ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿಯಲ್ಲಿ ಅಭ್ಯರ್ಥಿಗಳಿಗೆ ಅನೇಕ ಪ್ರವೇಶ ಮತ್ತು ನಿರ್ಗಮನದ ಸೌಲಭ್ಯವನ್ನು ಕಲ್ಪಸಬೇಕು. ಇದರಿಂದ ವಿದ್ಯಾರ್ಥಿಗಳಿಗೆ ಒಂದು ವರ್ಷದ ಪದವಿ ನಂತರ ತುರ್ತು ಪರಿಸ್ಥಿತಿಯಲ್ಲಿ ನಿರ್ಗಮಿಸಿದರೆ ಅವರಿಗೆ ಪಿ.ಜಿ. ಡಿಪ್ಲೋಮ ಅಥವ ಪಿ.ಜಿ ಸರ್ಟಿಫಿಕೇಟ್ ನೀಡಬಹುದು ಎಂದು ಸಲಹೆ ನೀಡಿದರು.

ಪ್ರೊ ಗೋಪಾಲ ನಾಯಕ್, ಇವರು ಮಾತನಾಡುತ್ತ

- ➢ ಅಭ್ಯರ್ಥಿಗಳಗೆ ಪದವಿಯಲ್ಲಿ ಅನೇಕ ಪ್ರವೇಶ ಮತ್ತು ನಿರ್ಗಮನದ ಸೌಲಭ್ಯ ನೀಡುವುದನ್ನು ವಿಶ್ವವಿದ್ಯಾಲಯ ಪರಿಗಣಿಸಬೇಕು.

- ➢ ನಮ್ಮ ವಿಶ್ವವಿದ್ಯಾಲಯದಲ್ಲಿ ಗ್ರಾಮೀಣಾಭಿವೃದ್ಧಿ ವಿಷಯದಲ್ಲಿ ಪದವಿಪೂರ್ವ ಪ್ರೋಗ್ರಾಮನ್ನು ಪ್ರಾರಂಭಿಸಬೇಕು. ಇದರಿಂದ ಗ್ರಾಮೀಣಾಭಿವೃದ್ಧಿ ವಿಷಯದಲ್ಲಿ ವಿದ್ಯಾರ್ಥಿಗಳಿಗೆ ಪದವಿಪೂರ್ವ ಹಾಗೂ ಸ್ನಾತಕೋತ್ತರ ಪದವಿ ಪಡೆಯಲು ಒಂದೇ ವಿಶ್ವವಿದ್ಯಾಲಯದಲ್ಲಿ ಅವಕಾಶ ಸಿಕ್ಕಿದಂತಾಗುತ್ತದೆ.
- ➢ ನಮ್ಮ ವಿಶ್ವವಿದ್ಯಾಲಯ ವಿದ್ಯಾರ್ಥಿಗಳಿಗೆ, ಅಧಿಕಾರಿಗಳಿಗೆ ಸಾಮಾನ್ಯ ತರಬೇತಿ ನೀಡುವುದರ ಜೊತೆ ಸಂಶೋಧನೆಗೆ ಹೆಚ್ಚು ಪ್ರಾಮುಖ್ಯತೆ ನೀಡಬೇಕು. ಇದರಿಂದ ಗ್ರಾಮೀಣಾಭಿವೃದ್ಧಿಯಲ್ಲಿ ಹೊಸ ವಿಧಾನಗಳು ತರಲು ಮತ್ತು ಹೆಚ್ಚು ಕೊಡುಗೆ ನೀಡಲು ಸಾಧ್ಯವಾಗುತ್ತದೆ ಎಂಬ ಸಲಹೆ ನೀಡಿದರು.

ಪ್ರೊ. ಎನ್.ಸಿವಣ್ಣ ಇವರು, ವಿಶ್ವವಿದ್ಯಾಲಯವು ಇನ್ನೂ ಪ್ರಾರಂಭದ ಹಂತದಲ್ಲಿರುವುದರಿಂದ, ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುವುದರಿಂದ, ನೂತನ ಶಿಕ್ಷಣ ನೀತಿಯಲ್ಲಿ ವಿವರಿಸಿದಂತೆ ಅಭ್ಯರ್ಥಿಗಳಿಗೆ ಅನೇಕ ಪ್ರವೇಶ ಮತ್ತು ನಿರ್ಗಮನದ ಸೌಲಭ್ಯವನ್ನು ಈಗಲೇ ಕಲ್ಪಿಸುವುದು ಅಷ್ಟಾಗಿ ಒಳ್ಳೆಯ ನಿರ್ಧಾರವಾಗಲಾರದು ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು

ಡಾ. ನಾಗೇಶ್ವರ್ ರಾವ್, ಇವರು ಮಾತನಾಡುತ್ತ ವಿಶ್ವವಿದ್ಯಾಲಯವು ಹೊಸ ಪದವಿಪೂರ್ವ ಮತ್ತು ಸ್ನಾತಕೋತ್ತರ ಪದವಿಗಳನ್ನು ಪ್ರಾರಂಭಿಸಲು ಆಲೋಚಿಸುತ್ತಿರುವುದರಿಂದ ಹತ್ತಿರದ ಎಲ್ಲಾ ಸೌಲಭ್ಯಗಳಿರುವ ಕಾಲೇಜುಗಳ ಜೊತೆ ಒಡಂಬಡಿಕೆ ಮಾಡಿಕೊಂಡು ಅಥವಾ ಆ ಕಾಲೇಜುಗಳಿಗೆ ಅಫಿಲಿಯೇಷನ್ ನೀಡಿ ಸದರಿ ಪ್ರೊಗ್ರಾಮನ್ನು ನಡೆಸಬಹುದು ಎಂದು ಸಲಹೆ ನೀಡಿದರು.

ಪ್ರೊ. ಸಿ.ಎಸ್. ಪಾಟೀಲ್, ಇವರು, ರಾಷ್ಟ್ರೀಯ ನೂತನ ಶಿಕ್ಷಣ ನೀತಿ 2020 ಸಂಬಂಧಿಸಿ ಮಾತನಾಡುತ್ತ, ನೂತನ ಶಿಕ್ಷಣ ನೀತಿಯ ಧ್ಯೇಯೋದ್ದೇಶಗಳನ್ನು ವಿಶ್ವವಿದ್ಯಾಲಯದಲ್ಲಿ ಈಡೇರಿಸಲು ಒಂದು ಪ್ರತ್ಯೇಕ ಕಾರ್ಯಪಡೆ (Task force) ರಚಿಸಿಬೇಕು ಎಂದು ಹೇಳಿದರು.

ಪ್ರೊ.ಜೀವನ್ ಕುಮಾರ್, ಇವರು ಮುಂದಿನ ವಿಶ್ವವಿದ್ಯಾಲಯದ ಕಾರ್ಯಕ್ರಮಗಳ ಬಗ್ಗೆ ಈ ಕೆಳಕಂಡಂತೆ ಸಲಹೆ ನೀಡಿದರು.

- ✓ ವಿದ್ಯಾರ್ಥಿಗಳು ಒಂದು ವೇಳೆ ಸ್ನಾತಕೋತ್ತರ ಪದವಿಯನ್ನು ಪೂರ್ಣಗೊಳಿಸದೆ ಬಿಟ್ಟು ಹೋಗುವ ಪರಿಸ್ಥಿತಿ ಬಂದರೆ, ಅಂತಹವರಿಗೆ 1 ವರ್ಷದ ನಂತರ ನಿರ್ಗಮನದ ಆಯ್ಕೆ ಕೊಟ್ಟು ಸರ್ಟಿಫಿಕೇಟ್/ಡಿಪ್ಲೋಮ ಪದವಿ ನೀಡಬಹುದು ಹಾಗೂ ಹಿಂತಿರುಗಿ ಬಂದ ಅಭ್ಯರ್ಥಿಗಳಿಗೆ ಪದವಿ ಪೂರ್ಣಗೊಳಿಸುವ ಅವಕಾಶ ನೀಡಬೇಕು.
- ✓ ವಿಶ್ವವಿದ್ಯಾಲಯವು ನೇಮಕಾತಿ ಮಾಡಲು ಬರುವ ಕಂಪನಿ ಅಥವಾ ಏಜೆನ್ಸಿಗಳ ಜೊತೆ, ಎನ್.ಜಿ.ಓ ಗಳ ಜೊತೆ ಒಡಂಬಡಿಕೆ ಮಾಡಿಕೊಂಡು ಅವರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಂದ ಯಾವ ಪ್ರತಿಭೆ ಮತ್ತು ಕೌಶಲ್ಯವನ್ನು ನಿರೀಕ್ಷಿಸುತ್ತಾರೆ ಎಂಬ ಪ್ರತಿಕ್ರಿಯೆ ಪಡೆದರೆ, ಆ ರೀತಿಯಲ್ಲಿ ಪಠ್ಯಕ್ರಮ ವಿನ್ಯಾಸ ಹಾಗೂ ವಿದ್ಯಾರ್ಥಿಗಳ ಕೌಶಲಾಭಿವೃದ್ಧಿಯ ಬಗ್ಗೆ ಕೆಲಸ ಮಾಡಬಹುದು.
- ✓ ವಿಶ್ವವಿದ್ಯಾಲಯದ ಐ.ಕ್ಯೂ.ಎ.ಸಿ. ಸೆಲ್ ಅನ್ನು ನೋಡಿಕೊಳ್ಳುವವರು ಡಾಕ್ಯುಮೆಂಟೇಷನ್ ಬಗ್ಗೆ, ವರದಿಗಳನ್ನು ತಯಾರಿಸುವುದರ ಬಗ್ಗೆ ಗುಣಮಟ್ಟವನ್ನು ಕಾಪಾಡಬೇಕು.
- ✓ ಭವಿಷ್ಯದಲ್ಲಿ ವಿಶ್ವವಿದ್ಯಾಲಯವು ನ್ಯಾಕ್ ಮಾನ್ಯತೆಯನ್ನು ಪಡೆಯಬೇಕಾಗಿದ್ದು, ವಿಶ್ವವಿದ್ಯಾಲಯದಲ್ಲಿ ಒಂದು 'ಅಲ್ಯುಮ್ನಿ ಸೆಲ್' ಸ್ಥಾಪಿಸಿ ಹಳೆಯ ವಿದ್ಯಾರ್ಥಿಗಳ ಚಟುವಟಿಕೆ ಹಾಗೂ ಅವರ ವಿವರವನ್ನು ದಾಖಲು ಮಾಡುವ ಅವಶ್ಯಕತೆ ಇದೆ.
- ✓ ನಮ್ಮ ವಿಶ್ವವಿದ್ಯಾಲಯದಲ್ಲಿ ಎಲ್ಲಾ ವಿದ್ಯಾರ್ಥಿಗಳು ಗ್ರಾಮೀಣ ಕ್ಷೇತ್ರದಲ್ಲಿ ಹೆಚ್ಚು ಪ್ರಾಯೋಗಿಕ ಕೆಲಸ ಮಾಡುವುದರಿಂದ ಅವರು ತಯಾರಿಸುವ ಶೈಕ್ಷಣಿಕ ಪ್ರಾಜೆಕ್ಟ್ ವರದಿಗಳಲ್ಲಿ ಉತ್ತಮವಾದುದನ್ನು ದಸ್ತಾವೇಜು ಮಾಡಿ ಅದನ್ನು ಪ್ರಕಟಣೆ ಮಾಡಬೇಕು ಹಾಗೂ ವಿಶ್ವವಿದ್ಯಾಲಯದ Newsletter ಪ್ರಕಟಿಸಲು ಸೂಕ್ತ ಕ್ರಮ ಜರುಗಿಸಬೇಕೆಂದು ವಿವರಿಸಿದರು

- ✓ ವಿಶ್ವವಿದ್ಯಾಲಯವು ಬೇರೆ ಸಂಸ್ಥೆಗಳೊಂದಿಗೆ ಸೇರಿ ಬಹುಶಿಸ್ತೀಯ ಸಂಶೋಧನಾ ಯೋಜನೆಗಳನ್ನು (Multidisciplinary Research Projects) ಕೈಗೆತ್ತಿಕೊಳ್ಳಬೇಕು.
- ✓ ವಿದ್ಯಾರ್ಥಿಗಳಲ್ಲಿ ಶಿಕ್ಷಕರ ಬಗ್ಗೆ, ಪಠ್ಯಕ್ರಮದ ಬಗ್ಗೆ ಪ್ರತಿಕಿಯೆ ಪಡೆದು ಅದರ ವಿಶ್ಲೇಷಣಾ ವರದಿ ತಯಾರಿಸುವುದು.
- ✓ ಪಠ್ಯಕ್ರಮ ಹಾಗೂ ಕೋರ್ಸ್ ವಿಷಯಗಳನ್ನು NET ಪರೀಕ್ಷೆಯ ಗುಣಮಟ್ಟಕ್ಕೆ ಪರಿಷ್ಕರಿಸುವುದು.
- ✓ ವಿಶ್ವವಿದ್ಯಾಲಯ ಪ್ರಸ್ತುತ ಡಾಕ್ಟರೇಟ್ ನೀಡದಿರುವ ಕಾರಣ, ಬೇರೆ ಸಂಸ್ಥೆಗಳೊಂದಿಗೆ ಸೇರಿ ವಿದ್ಯಾರ್ಥಿಗಳಿಗೆ ಪಿ.ಹೆಚ್.ಡಿ ಪಡೆಯಲು ಪ್ರೋತ್ಸಾಹಿಸಬೇಕು.

**ಮಾನ್ಯ ಕುಲಪತಿಗಳು ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸುತ್ತ,**

- ✓ ವಿಶ್ವವಿದ್ಯಾಲಯ ಅಧಿನಿಯಮ 4(3)(iii) ರನ್ವಯ, ವಿಶ್ವವದ್ಯಾಲಯದಲ್ಲಿ ಪದವಿಪೂರ್ವ ಕೋರ್ಸ್‌ಗಳನ್ನು ಆರಂಭಿಸಲು ಅವಕಾಶವಿದ್ದು, ಅದನ್ನು ಮುಂದಿನ ವರ್ಷಗಳಲ್ಲಿ ಪ್ರಾರಂಭಿಸಲು ಎಲ್ಲಾ ಸಿದ್ಧತೆಯನ್ನು ಮಾಡಿಕೊಳ್ಳಲಾಗುವುದು.
- ✓ ಹಿಂದಿನ ಶೈಕ್ಷಣಿಕ ಸಭೆಯ ನಿರ್ಣಯಾನುಸಾರ ತೆಗೆದುಕೊಂಡ ಕ್ರಮಗಳ ಅನುಸರಣಾ ವರದಿಯನ್ನು ಮುಂದಿನ ಸಭೆಗಳಲ್ಲಿ ಸಲ್ಲಿಸಲಾಗುವುದು.
- ✓ ನೂತನ ಶಿಕ್ಷಣ ನೀತಿ ಸಂಬಂಧಿಸಿ ಬೇರೆ ವಿಶ್ವವಿದ್ಯಾಲಯಗಳಲ್ಲಿ ಹೇಗೆ ಕಾರ್ಯಪಡೆ (Task force) ರಚಿಸಲಾಗಿದೆ ಹಾಗೂ ಅವರ ಕರ್ತವ್ಯಗಳು ಏನು ಎಂಬ ಅಧ್ಯಯನ ಮಾಡಿ ನಮ್ಮ ವಿಶ್ವವಿದ್ಯಾಲಯದಲ್ಲಿಯೂ ಪ್ರತ್ಯೇಕ ಕಾರ್ಯಪಡೆ (Task force) ಮಾಡಲಾಗುವುದು.
- ✓ ವಿಶ್ವವಿದ್ಯಾಲಯ 24-09-2020ರಂದು ಅಲ್ಯುಮಿನಿ ಸೆಲ್ ಅನ್ನು ಸ್ಥಾಪಿಸಲಾಗಿದ್ದು, ಅದಕ್ಕೆ 'ಅಭ್ಯುದಯ' ಎಂದು ಹೆಸರಿಡಲಾಗಿದೆ ಹಾಗೂ ಒಬ್ಬ ಸಂಯೋಜಕರನ್ನೂ ಕೂಡ ನೇಮಿಸಲಾಗಿದೆ.
- ✓ ವಿಶ್ವವಿದ್ಯಾಲಯವು ಅಕ್ಟೋಬರ್ 2, 2020ರಂದು ಪಂಚಾಯತ್ ರಾಜ್ ನಿಯಮಗಳು, ಹಾಗೂ ಸಂಬಂಧಿತ ಸರ್ಕಾರಿ ಅಧಿನಿಯಮಗಳ ಬಗ್ಗೆ ಸಮಗ್ರ ಮಾಹಿತಿಯನ್ನೊಳಗೊಂಡ ಪುಸ್ತಕ ಸರಣಿಯಲ್ಲಿ "ಭಾರತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಆಯಾಮಗಳು" ಸಂಪುಟ 1 ಎಂಬ ಪುಸ್ತಕವನ್ನು ಬಿಡುಗಡೆ ಮಾಡುತ್ತಿದೆ, ತದ ನಂತರ ಇನ್ನೂ ಹೆಚ್ಚು ಪ್ರಕಟಣೆಗಳನ್ನು ಹೊರತರಲಾಗುವುದೆಂದು ಸಭೆಗೆ ವಿವರಿಸಿದರು.
- ✓ ವಿಶ್ವವಿದ್ಯಾಲಯವು ಮುಂದಿನ ದಿನಮಾನಗಳಲ್ಲಿ ಹಮ್ಮಿಕೊಳ್ಳಬಹುದಾದ ಕಾರ್ಯಕ್ರಮಗಳನ್ನು ಹಾಗೂ ನಡೆಸಬೇಕಾಗಿರುವ ಶೈಕ್ಷಣಿಕ, ಸಂಶೋಧನೆ, ತರಬೇತಿ ಮತ್ತು ವಿಸ್ತೀರಣಾ ಚಟುವಟಿಕಗಳ ಕುರಿತು ಆದ್ಯತೆಗಳಿಗನುಸಾರ ಕ್ರಮ ಜರುಗಿಸಲು, ಒಂದು ಪ್ರತ್ಯೇಕ ಸಭೆ ಕರೆಯುವುದು ಸೂಕ್ತ ಎಂದು ಅಭಿಪ್ರಾಯ ಪಟ್ಟರು. ಅದರಲ್ಲಿ ಸವಿಸ್ತಾರವಾಗಿ ಚರ್ಚಿಸಿ, ಅದರಂತೆ ದೂರಗಾಮಿ ಯೋಜನೆಯನ್ನು/ ರೂಪುರೇಷೆಗಳನ್ನು ಸಿದ್ಧಪಡಿಸಲು ಅನುಕೂಲವಾಗುವುದು ಎಂದು ಸಭೆಯ ಗಮನಕ್ಕೆ ತಂದರು. ಎಲ್ಲ ಸದಸ್ಯರು ಈ ಪ್ರಸ್ತಾವನೆಗೆ ಒಪ್ಪಿದರು ಹಾಗೂ ಸದರಿ ಸಭೆಯಲ್ಲಿ ಭಾಗವಹಿಸುವುದಾಗಿ ತಿಳಿಸಿದರು.

ಕೊನೆಯಲ್ಲಿ ಸಮಿತಿಯ ಎಲ್ಲಾ ಸದಸ್ಯರಿಗೆ ಹಾಗೂ ಅಧ್ಯಕ್ಷರಿಗೆ, ಕುಲಸಚಿವರು ವಂದನಾರ್ಪಣೆ ಮಾಡುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಕುಲಸಚಿವರು**

19/10/20
**ಕುಲಪತಿಗಳು**